LEGISLATIVE BUSINESS

Karnataka Entertainment Tax (Amendment) Bill, 1980. Leave to Introduce

SRI VEERAPPA MOILY (Minister for Finance & Planning).—Sir, I beg to move :

"That leave be granted to introduce the Karnataka Entertainment Tax (Amendment) Bill, 1980."

MR. SPEAKER.—The question is :

"That leave be granted to introduce the Karnataka Entertainment Tax (Amendment) Bill, 1980."

The motion was adopted and leave was granted

SRI M. VEERAPPA MOILY (Minister for Fianance & Planning).—Sir, I introduce the Karnataka Entertainment Act (Amendment) Bill, 1980.

MR. SPEAKER.—The Bill is introduced.

The Karnataka State Universities (Amendment) Bill, 1980.

ಶ್ರೀ ಹೆಚ್. ಡಿ. ದೇವೇಗೌಡ.—ಕರ್ನಾಟಕ ಸ್ಟೇಟ್ ಯೂನಿವರ್ಸ್ಟಿಟಿ ಬಿಲ್ಲನ್ನು ಸಭೆಯು ಪರಿಶೀಲನೆಗೆ ತೆಗೆದುಕೊಳ್ಳುವುದಕ್ಕೆ ಮುಂಚೆ ಮಾನ್ಯ ಹಣಕಾಸಿನ ಸಚಿವರು ಸಭೆಗೆ ಆನೇಕಲ್ ಅಫೇರ್ಸ್ ಬಗ್ಗೆ ಒಂದು ಸ್ಟೇಟ್‌ಮೆಂಟ್ ಮಾಡುತ್ತೇನೆಂದು ಹೇಳಿದ್ದರು.

SRI M. VEERAPPA MOILY.—I will make a statement in the evening.

Motion to consider

SRI G. B. SHANKAR RAO.(Minister for Education).—I beg to move :

"That the Karnataka State Universities (Amendment) Bill 1980 be taken into consideration."

The Question was proposed

SRI G.B. SHANKAR RAO (Minister for Education).—There are four Universities established in Karnataka State including the University of Agriculture at Hebbal. The Universities are located at Bangalore, Mysore and Dharwar. Since the colleges are coming up pretty fast, these universities are unable to cope with the increasing demands of the students. These universities are already overcrowded. In order to case the pressure on the existing Universities, the Government of India and the Government of Karnataka constituted a One Man Commission to explore the possibilities of starting two more universities- one at Gulbarga and another at Mangalore. This one

man commission, after examining all aspects of the matter has recommended establishment of two more universities one to be located at Mangalore and another at Gulbarga. The present Bill is in consonence with the recommendations made by the one man commission.

10.30 A.M.

Now that the Bill is before the House to amend the existing Karnataka Universities Act of 1976 for creating these two Universities and also to go into the question of institution of temporary posts of certain categories of staff and for making certain temporary and part-time appointments and also to make provision for promotional opportunities for Scheduled Castes and Scheduled Tribes in the Universities. This Bill also provides for transfer of a University college to the Government. The Bill has also provided for certain formula amendments to be incorporated in the Act. As both the Houses were not in session, based on the opinions expressed by the Members of both the Houses, the Government took a decision to have an ordinance promulgated by the Governor. So, an ordinance was promulgated. This Bill has to replace that Ordinance which was promulgated in the month of May.

The one man commission, while sending proposals, has also given a financial memorandum mentioning the approximate expenditure to be incurred on the creation of these two Universities and the same has also been attached to the Bill. Now it is for the august House to consider the provisions of the Bill and get it passed.

SRI P. RAMDEV.—The Hon. Minister has referred to the report of the One Man Commission. We would like to know the salient features of the report and hence the hon. Minister may please supply copies of the same.

SRI G B. SHANKAR RAO.—It may not be possible to supply the copies of the report to all the Members because at present I am not having that number of copies.

SRI HARNAHALLI RAMASWAMY.—Printed copies may be supplied to the Members.

SRI P. RAMDEV.—Please see that at least some copies are supplied to the Members who are participating in the debate.

SRI A LAKSHMI SAGAR.—While making preliminary remarks and making a request to the House for considering and passing the Bill which is now before the House, the Hon. Education Minister has referred to the recommendations of one man Commission based upon

which the present Bill was prepared and has come before the House. It is better if we are enlightened about the compelling reasons which prompted the one man commission to make these recommendations. As my hon. friends has put it, we should know the salient features of tho-e recommendations that the Government ultimately agreed to and which recommendations are incorporated in the provisions of this Bill. You may kindly have the goodness to furnish us with a copy.

SRI G.B. SHANKAR RAO.—It may consume a lot of time if I go on reading the rec mmendations. I will get a few copies and distribute to certain Members who want to participate in the debate.

† ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಗಂಡಸಿ).—ಮಾನ್ಯ ಸಭಾಧ್ಯಕ್ಷರೇ, ಮಾನ್ಯ ವಿದ್ಯಾ ಮಂತ್ರಿಗಳು ಈ ಸಭೆಯ ಮುಂದೆ ಮಂಡಿಸಿರತಕ್ಕ ವಿಶ್ವವಿದ್ಯಾನಿಲಯದ ತಿದ್ದುಪಡಿ ಮಸೂದೆಯನ್ನು ನಾನು ಸ್ವಾಗತಿಸುತ್ತೇನೆ. ಈ ಮಸೂದೆಯ ಮುಖಾಂತರ ಕರ್ನಾಟಕ ರಾಜ್ಯದಲ್ಲಿ ಬಹಳ ದಿವಸಗಳಿಂದ ಇದ್ದಂತಹ ಬೇಡಿಕೆ ಈಗ ಈಡೇರತಕ್ಕಂಥಾ ಕಾಲ ಬಂದಿದೆ. ಒಂದು ಭಾಗ ಅತ್ಯಂತ ಮುಂದುವರಿದ ಭಾಗ. ಅದೆಂದರೆ, ಮಂಗಳೂರು ಮತ್ತು ಕೊಡಗು ಪ್ರದೇಶಗಳು. ಮತ್ತೊಂದು ಭಾಗ ಅತ್ಯಂತ ಹಿಂದುಳಿದ ಪ್ರದೇಶ ; ಅದೆಂದರೆ, ಹೈದರಾಬಾದ್ ಕರ್ನಾಟಕಕ್ಕೆ ಸೇರಿದ್ದು. ಈವೆರಡು ವಿಭಾಗಗಳಿಗೆ ಪ್ರತ್ಯೇಕ ವಿಶ್ವವಿದ್ಯಾನಿಲಯಗಳು ದೊರಕುವಂತೆ ಈ ಮಸೂದೆ ತಂದಿರತಕ್ಕದ್ದು ಕರ್ನಾಟಕದಲ್ಲಿ ಒಂದು ಹೊಸ ಸಾಧನೆ ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದು ವಿದ್ಯಾಭ್ಯಾಸ ವಿಸ್ತರಣೆಯ ಕ್ಷೇತ್ರದಲ್ಲಿ ಒಂದು ಹೊಸ ಮಜಲು ಎಂದು ಹೇಳಬಹುದು. ವಿದ್ಯಾಭ್ಯಾಸ ವಸ್ತು, ಕಂಟೆಂಟ್ಸ್ ಎಂದು ಏನು ಹೇಳುತ್ತೇವೆ ಅದು ಈ ಮಸೂದೆಯಲ್ಲಿ ಬರುವುದಿಲ್ಲ. ಅದಕ್ಕೆ ಪ್ರತ್ಯೇಕವಾಗಿ ದೀರ್ಘವಾಗಿ ಸಮಗ್ರ ಯೋಚನೆ ಮಾಡಬೇಕಾದಂತಹ ಕಾಲ ಇದೆ. ಆದರೆ ವಿದ್ಯಾಭ್ಯಾಸದ ಸ್ವರೂಪ ವಿಸ್ತರಣೆ ದೃಷ್ಟಿಯಿಂದ ಈ ಮಸೂದೆ ಸ್ವಾಗತಾರ್ಹವಾದುದು ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಆದರೆ ಇದರಲ್ಲಿ ಒಂದು ಕೊರತೆ ನನಗೆ ಕಾಣುತ್ತದೆ ; ಏನೆಂದರೆ ಇದಕ್ಕಿಂತ ಮೊದಲು ಇದರ ಜೊತೆಯಲ್ಲಿ ಕರ್ನಾಟಕ ರಾಜ್ಯದಲ್ಲಿ ತಾಂತ್ರಿಕ ವಿಶ್ವವಿದ್ಯಾನಿಲಯ ಆಗಬೇಕಾಗಿತ್ತು. ತಾಂತ್ರಿಕ ಶಿಕ್ಷಣದಲ್ಲಿ, ಇಂಜಿನಿಯರಿಂಗ್ ಶಿಕ್ಷಣದಲ್ಲಿ ಇಡೀ ಭಾರತದಲ್ಲಿಯೇ ಕರ್ನಾಟಕ ಮುಂದೆ ಇದೆ. ಹಿಂದೆ ೧೭ ಇಂಜಿನಿಯರಿಂಗ್ ಕಾಲೇಜುಗಳು ಇದ್ದವು. ಈಗ ೨೬ ಆಗಿದೆ, ಯಾವುದೇ ರಾಜ್ಯದಲ್ಲಿ ಇಷ್ಟು ತಾಂತ್ರಿಕ ಶಿಕ್ಷಣ ಸಂಸ್ಥೆಗಳು ಇಲ್ಲ. ಪ್ರತಿ ಜಿಲ್ಲೆಯಲ್ಲಿಯೂ ಪಾಲಿಟೆಕ್ನಿಕ್‌ಗಳು ಇವೆ. ಮತ್ತು ತಾಂತ್ರಿಕ ಸಂಸ್ಥೆಗಳು ಇವೆ. ದಕ್ಷಿಣ ರಾಜ್ಯದ ಆಂಧ್ರದಲ್ಲಿ ತಾಂತ್ರಿಕ ವಿಶ್ವವಿದ್ಯಾನಿಲಯ ಇದೆ. ತಮಿಳುನಾಡಿನಲ್ಲಿ ಇದೆ. ಕೇರಳದಲ್ಲಿ ಇದೆ. ಆದ್ದರಿಂದ ಕರ್ನಾಟಕದಲ್ಲಿ ತಾಂತ್ರಿಕ ಶಿಕ್ಷಣ ಸಂಸ್ಥೆಗಳನ್ನು ಕ್ರೋಢೀಕರಿಸಿ ಸಮಗ್ರವಾದ ಒಂದು ವಿಶಿಷ್ಟ ಸ್ವರೂಪದ ತಾಂತ್ರಿಕ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸುವುದು ಬಹಳ ಅಗತ್ಯವಿದೆ. ಅದನ್ನು ಇದರ ಜೊತೆಯಲ್ಲಿಯೇ ತೆಗೆದುಕೊಂಡಿಲ್ಲ ; ಆ ಒಂದು ಕೊರತೆಯನ್ನು ನಾನು ಇಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಮತ್ತೊಂದು ಅಂಶ ಏನೆಂದರೆ ಈ ಮಸೂದೆಯಲ್ಲಿ ಕೇವಲ ಎರಡು ವಿಶ್ವವಿದ್ಯಾನಿಲಯಗಳ ಸ್ಥಾಪನೆಯ ಬಗ್ಗೆ ಮಾತ್ರ ವಿವರಗಳನ್ನು ಅದರಲ್ಲಿ ಅಳವಡಿಸಿಲ್ಲ. ಇದರ ಜೊತೆಗೆ ಬೇರೆ ಕೆಲವು ವಿವರಗಳನ್ನೂ ಅಳವಡಿಸಿದ್ದಾರೆಂದು ನನಗೆ ಅನಿಸುತ್ತದೆ. ಈ ಒಂದು ವಿಶ್ವವಿದ್ಯಾನಿಲಯದ ವಿಧೇಯಕ ಏನಿದೆ ಇದನ್ನು ಸಮಗ್ರವಾಗಿ ಪುನರ್ ಪರಿಶೀಲನೆ ಮಾಡುವುದು ಅಗತ್ಯ ಇದೆ. ಇದರಲ್ಲಿ ಅನೇಕ ಕುಂದು ಕೊರತೆಗಳು ಇವೆ. ವಿಶ್ವವಿದ್ಯಾನಿಲಯದ ಸ್ವಾಯತ್ತತೆಗೆ ಧಕ್ಕೆ ಬರತಕ್ಕಂಥಾ ವಿಷಯಗಳು ಇದರಲ್ಲಿವೆ. ವಿಶ್ವವಿದ್ಯಾನಿಲಯದಲ್ಲಿರತಕ್ಕ ವಿದ್ಯೆಯ ಮಟ್ಟ, ಇದರಲ್ಲಿ ಪ್ರಾವೀಣ್ಯತೆ, ಮತ್ತು ಇಲ್ಲಿರತಕ್ಕ ಬೋಧಕ ವರ್ಗದವರು ಪ್ರಾವೀಣ್ಯತೆಯ ಬಗ್ಗೆ ಹೆಚ್ಚು ಸಮಗ್ರವಾಗಿ ವಿಚಾರ ಮಾಡಿ ಸೂಕ್ತ ಪರಿಹಾರವನ್ನು ಕೊಡಬೇಕಾದಂತಹ ಪರಿಸ್ಥಿತಿ ಇದೆ. ಆದ್ದರಿಂದ ಇದನ್ನೆಲ್ಲಾ ಒಟ್ಟಿಗೆ ತೆಗೆದುಕೊಂಡಿದ್ದರೆ ಚೆನ್ನಾಗಿತೆಂದು ನನಗೆ ಅನಿಸುತ್ತದೆ. ಇದರಲ್ಲಿ ವಿಶ್ವವಿದ್ಯಾನಿಲಯದ ಸ್ಥಾಪನೆಗೆ ಸಂಬಂಧಪಡದೇ ಇರುವ ಕೆಲವು ವಿಷಯ

ಗಳು ಈಗ ಇಲ್ಲಿ ಬರತಕ್ಕ ಅವಶ್ಯಕತೆ ಇನಲಿಲ್ಲ. ಇವನ್ನು ಸೂಕ್ಷ್ಮವಾಗಿ ನಾನು ಪರಿಶೀಲನೆ ಮಾಡಿ ನನಗೆ ತಿಳಿದ ಕೆಲವು ಅಂಶಗಳನ್ನು ಹೇಳುತ್ತಿದ್ದೇನೆ. ಇದರಲ್ಲಿ ನನಗೆ ಒಂದು ಸಂಶಯ ಬಂದಿದೆ. ಈಗಾಗಲೇ ಮೇ ೨೪ನೇ ತಾರೀಖಿನಿಂದ ಈ ಮಸೂದೆ ಜಾರಿಗೆ ಬಂದಿದೆ ಎಂದು ತಿಳಿದುಕೊಳ್ಳಬೇಕು ಎಂದು ಈ ಮಸೂದೆಯಲ್ಲಿ ನಮೂದು ಮಾಡಲಾಗಿದೆ. ಮಾನ್ಯ ವಿದ್ಯಾ ಮಂತ್ರಿಗಳು ಈ ಒಂದು ತಿದ್ದುಪಡಿಯನ್ನು ಸೂಚಿಸಿ ಇದನ್ನು ಜಾರಿಗೆ ಕೊಡಬೇಕು ಎಂದು ಇದರಲ್ಲಿ ಸೇರಿಸಿದ್ದಾರೆ. ಇದು ತಪ್ಪಾಗುತ್ತದೆ. ಈ ತಿದ್ದುಪಡಿಯ ಪ್ರಕಾರ ಈಗಾಗಲೇ ವಿಶ್ವವಿದ್ಯಾನಿಲಯಗಳು ಅಸ್ತಿತ್ವಕ್ಕೆ ಬಂದಿವೆ. ವಿಶ್ವವಿದ್ಯಾನಿಲಯದ ಅಧಿಕಾರಿಗಳನ್ನು ನೇಮಿಸಿ ಕಾರ್ಯಗಳನ್ನು ಮಾಡುವುದಕ್ಕೆ ಅವಕಾಶ ಮಾಡಿದ್ದಾರೆ. ಇಲ್ಲಿ ಜಾರಿ ಮಾಡಬೇಕಾದ ಕಾರ್ಯಕ್ರಮಗಳೆಲ್ಲಾ ಹಿಂದೆಯೇ ಜಾರಿಗೆ ಬಂದಿವೆ. ಆದ್ದರಿಂದ ಈ ತಿದ್ದುಪಡಿ ಸೂಕ್ತವಲ್ಲ ಎಂದು ನನಗೆ ಅನಿಸುತ್ತದೆ. ಯಾವೊತ್ತು ಇದರ ಬಗ್ಗೆ ಆರ್ಡಿನೆನ್ಸ್ ಹೊರಡಿಸಿದರೋ ಆವೊತ್ತೇ ಇದು ಜಾರಿಗೆ ಬಂದಿದೆ ಎಂದು ನಾವು ಭಾವಿಸಬೇಕಾಗಿದೆ. ಆರ್ಡಿನೆನ್ಸ್‌ನ್ನು ಕ್ರಮಗೊಳಿಸಲು ಈ ಮಸೂದೆಯನ್ನು ನಮ್ಮ ಮುಂದೆ ಇಡಲಾಗಿದೆ.

(MR. DEPUTY SPEAKER in the Chair).

ಈ ವಿಧೇಯಕದ ಕೆಲವು ಅಂಶಗಳ ಬಗ್ಗೆ ನನ್ನ ಅಭಿಪ್ರಾಯವನ್ನು ಸೂಚಿಸುತ್ತೇನೆ. ಇಲ್ಲಿ ೬ನೇ ವಿಧಿ ಪ್ರಕಾರ ಮೊದಲು ಏನು ಇತ್ತು ಎಂದರೆ, ಪುಸ್ತಕ ಭಂಡಾರದ ಅಧಿಕಾರಿಗಳು ಈಗ ಏನು ಇದ್ದಾರೆ ಅವರನ್ನೇ ಲೈಬ್ರರಿ ಮುಖ್ಯಸ್ಥರನ್ನಾಗಿ ಮಾಡಬೇಕು ಅಂತ ಇತ್ತು. ಈವಾಗ ಇದರ ಬಗ್ಗೆ ನೀವು ತಂದಿರತಕ್ಕಂಥಾ ತಿದ್ದುಪಡಿಯಲ್ಲಿ ಅದನ್ನು ತೆಗೆದು ಹಾಕಿದ್ದೀರಿ. ಇದನ್ನು ಇದರಲ್ಲಿ ಏತಕ್ಕಾಗಿ ತೆಗೆದು ಹಾಕಿದ್ದೀರಿ ಎನ್ನುವ ಬಗ್ಗೆ ತಾವು ವಿವರಣೆ ಕೊಡಬೇಕು. ಅಥವಾ ಯಾವುದಾದರೂ ವ್ಯಕ್ತಿಗಳನ್ನು ತಮ್ಮ ಗಮನದಲ್ಲಿಟ್ಟುಕೊಂಡು ಈ ತರಹ ಒಂದು ತಿದ್ದುಪಡಿ ತಂದಿದ್ದೀರಾ ? ವಿಶ್ವವಿದ್ಯಾನಿಲಯ ಇದ್ದ ಕಾಲದಿಂದಲೂ ಕೂಡ ಈ ಪುಸ್ತಕ ಭಂಡಾರದ ಅಧಿಕಾರಿಗಳು ಅಲ್ಲಿಯ ಮುಖ್ಯಾಧಿಕಾರಿಗಳಾಗಿ ಕೆಲಸ ಮಾಡಿಕೊಂಡು ಬಂದಿದ್ದಾರೆ. ಹೀಗಿರುವಾಗ ಈಗ ಇದನ್ನು ತಾವು ತೆಗೆದು ಹಾಕಿದ್ದೀರಲ್ಲಾ ಇದರ ಬಗ್ಗೆ ವಿಶ್ವವಿದ್ಯಾನಿಲಯದವರು ಏನಾದರೂ ಸೂಚಿಸಿದ್ದಾರೆಯೋ ? ಈ ಬಗ್ಗೆ ಏತಕ್ಕೆ ತಿದ್ದುಪಡಿಯಾಯಿತು ಅನ್ನುವುದಕ್ಕೆ ವಿವರಣೆ ಕೊಡಿ. ಇದು ಪೂರ್ಣ ಅಪಕ್ವತ ಎಂದು ನಾನು ಹೇಳುತ್ತೇನೆ. ಈ ಒಂದು ಮುಖ್ಯ ವಿಷಯಕ್ಕಾದರೂ ಕೂಡ ವಿಶ್ವವಿದ್ಯಾನಿಲಯದವರ ಅಭಿಪ್ರಾಯವನ್ನು ತೆಗೆದುಕೊಂಡು ಮಾಡಬೇಕೇ ವಿನಾ ತಮಗೆ ಬೇಕಾದ ರೀತಿಯಲ್ಲಿ ತಿದ್ದುಪಡಿ ಮಾಡುವುದು ಸೂಕ್ತ ಅಲ್ಲ ಎಂದು ಹೇಳುತ್ತೇನೆ.

ಇನ್ನು ಸಿಂಡಿಕೇಟ್ ಸದಸ್ಯರು ಸೇರಿ ಮೊದಲು ಡೈರೆಕ್ಟರ್ ಆಫ್ ಹೆಲ್ತ್ ಅಂತ ಇದ್ದುದನ್ನು ಡೈರೆಕ್ಟರ್ ಆಫ್ ಮೆಡಿಕಲ್ ಎಜುಕೇಷನ್ ಅಂತ ಮಾಡಿದ್ದಾರೆ. ಇದು ಅವಶ್ಯಕವಾಗಿ ಆಗಬೇಕಾಗಿತ್ತು. ಈಗ ಇದು ಆಗಿರುವುದು ಸೂಕ್ತ.

ಇನ್ನು ೧೨ನೇ ವಿಧಿಯಲ್ಲಿ ೪೯ನ್ನು ತಿದ್ದುಪಡಿ ಮಾಡಬೇಕೆಂದು ಒಂದು ಸೂಚನೆ ಕೊಟ್ಟಿದ್ದೀರಿ. ಇದು ನೋಡಿದರೆ ಬಹಳ ವಿಚಿತ್ರವಾಗಿದೆ. ೪೯ನೇ ವಿಧಿಯಲ್ಲಿ ಏನು ಹೇಳುತ್ತದೆ ಎಂದರೆ ಬೋರ್ಡ್ ಆಫ್ ಅಪಾಯಿಂಟ್‌ಮೆಂಟಿನವರು ಇತರೇ ಅಧಿಕಾರಿಗಳನ್ನು ನೇಮಕ ಮಾಡುವಾಗ ಯು ಜಿ ಸಿ ಅವರು ಮಾಡಿರತಕ್ಕಂಥಾ ಪಟ್ಟಿಯಲ್ಲಿ ಇಬ್ಬರನ್ನೂ ಮತ್ತು ರಾಜ್ಯದಲ್ಲಿ ಇರುವವರಲ್ಲಿ ಒಬ್ಬರನ್ನೂ ತೆಗೆದುಕೊಳ್ಳಬೇಕು ಅಂತ ಇದೆ. ಈಗ ನೀವು ತಂದಿರುವ ತಿದ್ದುಪಡಿಯಲ್ಲಿ ಈ ಮೂರನೆಯವರನ್ನೂ ಕೂಡ ಭಾರತದಲ್ಲಿ ಯಾರನ್ನು ಬೇಕಾದರೂ ಸಹ ತೆಗೆದುಕೊಳ್ಳಬಹುದು ಅಂತ ಸೂಚಿಸಿದ್ದೀರಿ. ಮೊದಲು ಅಖಿಲಭಾರತ ಮಟ್ಟದಲ್ಲಿರುವ ಇಬ್ಬರು ಪರಿಣತರನ್ನು ಸೇರಿಸಬೇಕು ಅಂತ ಇತ್ತು. ಈಗ ಮೂರನೇದೂ ಕೂಡ ಅವರನ್ನೇ ತೆಗೆದುಕೊಳ್ಳಬೇಕು ಅಂತ ಸೇರಿಸಿದ್ದೀರಲ್ಲಾ ಇದರ ಉದ್ದೇಶ ಏನು ? ಇದರಲ್ಲಿ ೩ನೇವರಲ್ಲಿ ಏನಿದೆ ಎಂದರೆ,

> "three experts nominated by the Chancellor, two of whom from a panel furnished by the University Grants Commission and the other from amongst persons serving in any other University in the State"

ಅಂತ ಇದೆ. ಇದರಲ್ಲಿ ಏನು ತಪ್ಪು ಇದೆ ಹೇಳಿ ? ನೀವು ಇದರಲಿ ಏನು ಬದಲಾವಣೆ ಮಾಡಬೇಕು ಅಂತ ಇದ್ದೀರಿ ಎಂದರೆ

"Any University established by law in India or any other institution recognised by the State Government."

ಎಂದು. ಇದರಲ್ಲಿ ಮೂರನೆಯವರನ್ನೂ ಕೂಡ ರಾಜ್ಯದ ಹೊರಗಡೆಯಿಂದ ತರುವುದಕ್ಕೆ ಅವಕಾಶ ಮಾಡಿದ್ದೀರಿ. ಏತಕ್ಕೆ ಈ ಒಂದು ತಿದ್ದುಪಡಿಯನ್ನು ತರುವುದಕ್ಕೆ ಇಚ್ಛೆಪಟ್ಟಿದ್ದೀರಾ ಅನ್ನುವುದನ್ನು ತಾವು ತಿಳಿಸಬೇಕು. ಒಂದು ಶಾಸನವಾದ ಮೇಲೆ ಅದಕ್ಕೆ ಒಂದು ತಿದ್ದುಪಡಿಯನ್ನು ತರಬೇಕಾದರೆ ಅದು ಯಾವುದೇ ತಿದ್ದುಪಡಿಯಾಗಲಿ, ಅದಕ್ಕೆ ಒಂದು ಕಾರಣ ಇರಬೇಕಲ್ಲವೆ ? ಹೀಗೆ ಮಾಡಿದ್ದೀರಲ್ಲಾ ಅಲ್ಲಿಗೆ ನಮ್ಮ ಕರ್ನಾಟಕದ ಪರಿಣತರು ಇಲ್ಲವೇ ? ವಿದ್ಯಾಮಂತ್ರಿಗಳು ಏತಕ್ಕೋಸ್ಕರ ಇದನ್ನು ಬದಲಾವಣೆ ಮಾಡಿದ್ದೇವೆ ಅನ್ನುವ ಅಂಶವನ್ನು ಹೇಳಬೇಕಾಗಿತ್ತು. ಅಥವಾ ಯಾವ ಉದ್ದೇಶದಿಂದ ಇದನ್ನು ತರುತ್ತೇವೆ ಅನ್ನುವುದನ್ನಾದರೂ ಹೇಳಬೇಕಾಗಿತ್ತು ಯಾವ ಉದ್ದೇಶಕ್ಕಾಗಿ ಇದನ್ನು ತಂದಿದ್ದಾರೆ ಯಾವ ಉದ್ದೇಶಕ್ಕಾಗಿ ಇದು ಬದಲಾವಣೆ ಮಾಡಿದ್ದು ಎಂಬ ಬಗ್ಗೆ ಒಂದು ಸಮಿತಿ ಈಗ ಏನು ಇದೆ ಆ ಸಮಿತಿಯವರಾದರೂ ತಿಳಿಸಬೇಕಾಗಿತ್ತು. ಮೂಲ ವಿಧೇಯಕದಲ್ಲಿ ಕರ್ನಾಟಕದ ಪರಿಣತರೂ ಇರಬೇಕು ಎಂದು ಇದ್ದುದನ್ನು ತೆಗೆದು ಹಾಕಿ ಬದಲಾವಣೆ ಮಾಡಿದ್ದೀರಲ್ಲವೆ ಇದರ ಉದ್ದೇಶ ಏನು ? ಕರ್ನಾಟಕ ಹೊರಗಡೆ ಇರುವವರನ್ನೇ ತೆಗೆದುಕೊಳ್ಳಬೇಕು ಎನ್ನುವುದರ ಒಂದು ಹಿನ್ನೆಲೆ ಏನು ಎಂಬುದನ್ನು ತಾವು ತಿಳಿಸಬೇಕು. ಇದನ್ನು ಮಾಡುವಾಗ ಮಾನ್ಯ ಮಂತ್ರಿಗಳು ಪರಿಶೀಲನೆ ಮಾಡಿದ್ದಾರೋ ಇಲ್ಲವೋ ಗೊತ್ತಿಲ್ಲ. ಈ ಒಂದು ತಿದ್ದುಪಡಿ ಅನಾವಶ್ಯಕ ಎಂದು ಅಷ್ಟು ಮಾತ್ರ ನಾನು ಹೇಳುತ್ತೇನೆ.

ಇನ್ನು 2ನೇ ವಿಧಿಯಲ್ಲಿ ನೀವು ಕೊಟ್ಟಿರುವುದನ್ನು ನೋಡಿದರೆ ಅದೂ ಕೂಡ ಅನಾವಶ್ಯಕ ಎಂದು ಹೇಳುತ್ತೇನೆ. ಇದರ ಬಗ್ಗೆ ತಾವು ಗಮನ ಕೊಡಬೇಕು ಏತಕ್ಕೆಂದರೆ ಇದರಲ್ಲಿ ಯಾವ ಪ್ರೆಸ್ಟೀಜ್ ಬರುತ್ತವೆ ಅನ್ನುವ ಪ್ರಶ್ನೆ ಅಲ್ಲ. ಈಗ ಹೊಸ ವಿಶ್ವವಿದ್ಯಾನಿಲಯಗಳನ್ನು ಸ್ಥಾಪನೆ ಮಾಡತಕ್ಕಂಥಾದ್ದರ ಬಗ್ಗೆ ತಂದಿರತಕ್ಕಂಥಾ ವಿಧೇಯಕವನ್ನು ನಾನು ಸ್ವಾಗತ ಮಾಡುತ್ತೇನೆ ಆದರೆ ಅದರ ಬಗ್ಗೆ ಏನಾದರೂ ಸಣ್ಣಪುಟ್ಟ ತಿದ್ದುಪಡಿಗಳು ಅವಶ್ಯಕವಾಗಿ ಮಾಡಬೇಕಾಗಿದ್ದರೆ ಅದನ್ನು ಮಾಡಬೇಕು, ಅನಾವಶ್ಯಕವಾಗಿರುವುದನ್ನು ಕೈಬಿಡಬೇಕು. ನೀವು ಹಾಗೆ ಮಾಡಿಲ್ಲಾ. ಈಗ ಇರತಕ್ಕಂಥಾ ಅಸಲು ವಿಧೇಯಕದಲ್ಲಿ ಏನಿತ್ತು ಅಂದರೆ ಇಬ್ಬರನ್ನು ರಾಜ್ಯದ ಹೊರಗಡೆ ಇರುವವರನ್ನು ತೆಗೆದುಕೊಳ್ಳಬೇಕು, ಇನ್ನೊಬ್ಬರನ್ನು ಕರ್ನಾಟಕ ರಾಜ್ಯದಲ್ಲಿರುವವರನ್ನು ತೆಗೆದುಕೊಳ್ಳಬೇಕು ಅಂತ ಇತ್ತು. ಅದನ್ನು ಬದಲಾವಣೆ ಮಾಡಿ ಮೂರನೆಯವರನ್ನೂ ಕೂಡ ಹೊರಗಡೆಯವರನ್ನೇ ತೆಗೆದುಕೊಳ್ಳಬೇಕು ಅಂತ ಮಾಡಿರುವುದು ಸೂಕ್ತವಲ್ಲ ಎಂದು ಅಷ್ಟು ಮಾತ್ರ ಹೇಳುತ್ತೇನೆ.

ಇನ್ನು 3ನೇ ವಿಧಿಯಲ್ಲಿ ಅಪಾಯಿಂಟ್‌ಮೆಂಟ್ ಆಫ್ ಬೋರ್ಡ್ಸ್ ಬಗ್ಗೆ ಒಂದು ಸೂಚನೆ ತಂದಿದ್ದೀರಿ. ಮೊದಲು ಇರತಕ್ಕಂಥಾ ಕಾನೂನಿನಲ್ಲಿ ಅಪಾಯಿಂಟ್‌ಮೆಂಟ್ ಬೋರ್ಡ್‌ನಲ್ಲಿ ಛಾನ್ಸಲರ್ ನೇಮಕ ಮಾಡಿದಂಥಾ ಸದಸ್ಯರೇ ಇದ್ದಾರೆ. ಅದರಲ್ಲಿ ವಿಶ್ವವಿದ್ಯಾನಿಲಯದ ವೈಸ್ ಛಾನ್ಸಲರ್ ಇದ್ದಾರೆ, ಬೇರೆ ಸರ್ಕಾರೀ ಅಧಿಕಾರಿಗಳೂ ಇದ್ದಾರೆ, ಮತ್ತು ಯಾವ ಯಾವ ಇಲಾಖೆಗೆ ಸಂಬಂಧಪಡುತ್ತದೋ ಆಯಾಯಾ ಮುಖ್ಯಾಧಿಕಾರಿಗಳೂ ಇದ್ದಾರೆ. ಇವರೆಲ್ಲರೂ ಕೂಡಿ ಮಾಡಿದಂಥಾ ನಿರ್ಣಯವನ್ನು ಛಾನ್ಸಲರ್ ಒಪ್ಪಲೇಬೇಕು. ಈಗ ಇರತಕ್ಕಂಥಾ ಕಾನೂನಿನಲ್ಲಿ ಏನು ಇದೆ ಎಂದರೆ ಅದನ್ನು ಓದುತ್ತೇನೆ, ಅದು ಈ ರೀತಿ ಇದೆ :—

"The Board shall interview, a judge the merit of each candidate in accordance with the qualifications advertised and prepare a list of persons selected arranged in the order of merit. It shall forward the list to the Chancellor who shall make appointments in accordance with the same".

In view of this amendment the Chancellor has no option to give his approval. ಈಗ ತಮಗೆ ಹೇಳಬೇಕಾದರೆ, ಈ ಅಪಾಯಿಂಟ್‌ಮೆಂಟ್ ಬೋರ್ಡ್‌ನಲ್ಲಿ ಇರುವವರು ಪೂರ್ಣವಾಗಿ ಪರಿಣತರಿಂದ ಕೂಡಿದ ಒಂದು ಸಮಿತಿಯಾಗಿದೆ. ಮತ್ತು ವಿಶ್ವವಿದ್ಯಾನಿಲಯದ

ವೈಸ್‌ಛಾನ್ಸಲರ್ ಇರತಕ್ಕಂಥಾ ಒಂದು ಸಮಿತಿಯಾಗಿದೆ. ಇವರೆಲ್ಲರೂ ಕೂಡಿ ಮಾಡತಕ್ಕಂಥಾ ಯಾವುದೇ ಒಂದು ನಿರ್ಣಯವಾಗಲಿ, ಅದು ಇವರ ಒಂದು ವ್ಯಾಪ್ತಿಯಲ್ಲೇ ಇರಬೇಕು ಎನ್ನುವ ಒಂದು ತಿದ್ದುಪಡಿಯನ್ನು ಈಗ ಸೂಚಿಸಿದ್ದಾರೆ, ಇದು ಅನಾವಶ್ಯಕ ಎಂದು ಹೇಳುತ್ತೇನೆ. ಏತಕೆಂದರೆ ಈ ಬಗ್ಗೆ ನಮ್ಮ ಕುಲಪತಿಗಳು is there by virtue of his office as Governor. ರಾಜ್ಯಪಾಲರಿಗೆ ಇರುವ ಒಂದು ಗೌರವದ ಮೇಲೆ, ಅವರ ಒಂದು ಅಧಿಕಾರದ ಮೇಲೆ ಈ ಸದಸ್ಯರೆಲ್ಲಾ ಆ ಸಮಿತಿಯಲ್ಲಿದ್ದಾರೆ. ರಾಜ್ಯಪಾಲರು ಅವರು ಮಾಡಿದಂಥಾ ಸಲಹೆಗಳ ಮೇಲೆ ಕೆಲಸಗಳನ್ನು ಮಾಡುತ್ತಾರೆ, By the aid and advice of the Council of Ministers ಆ ಒಂದು ಆಧಾರದ ಮೇಲೆ ವಿಶ್ವವಿದ್ಯಾನಿಲಯ ಸ್ವಾಯತ್ತತೆ ಉಳಿಸಿಕೊಳ್ಳುವುದಕ್ಕೆ ಸಾಧ್ಯ.

ಇನ್ನು ಈ ವಿಶ್ವವಿದ್ಯಾನಿಲಯದಲ್ಲಿ ಸಿಂಡಿಕೇಟ್ ಮತ್ತು ಸೆನೇಟ್ ಇದೆ. ಅದರಲ್ಲೂ ಸಹ ಪರಿಣತರು ಕೂತುಕೊಂಡು ಕೆಲಸ ಮಾಡತಕ್ಕಂಥಾ ಸಂಸ್ಥೆ. ಆ ಪರಿಣತರನ್ನೂ ಸಹ ನೇಮಕ ಮಾಡತಕ್ಕಂಥಾ ಅಧಿಕಾರ ರಾಜ್ಯಪಾಲರಿಗೆ ಇದೆ. ಬೇರೆ ಬೇರೆ ರಾಜ್ಯಗಳಲ್ಲೂ ಇದೇರೀತಿ ಮಾಡಿರುವುದರಿಂದ ಇಂತಹ ಮಹತ್ವವಾದ ನಿರ್ಣಯವನ್ನು ಅವರು ಒಪ್ಪಲೇಬೇಕು. ಆದುದರಿಂದ ನಾನು ಹೇಳುವುದೇನೆಂದರೆ, ಮೊದಲಿನ ಒಂದು ಕಾನೂನೂ ಕೂಡ ಅವಶ್ಯ ಇದೆ, ಈಗ ಇದರ ಬಗ್ಗೆ ಏನು ಒಂದು ತಿದ್ದುಪಡಿ ತಂದಿದ್ದಾರೆ, ಈ ಒಂದು ವ್ಯಾಪ್ತಿಯಲ್ಲಿ ಇರಬೇಕು ಅಂತ ಏನು ಮಾಡಿದ್ದಾರೆ ಅದು ಇದ್ದರೂ ಇರಬಹುದು. ಅದಕ್ಕೆ ಕಾರಣವನ್ನೂ ಸಹ ಕೊಟ್ಟಿದ್ದಾರೆ. ಅದು ಹೀಗೆ ಇದೆ. If he does not satisfy the provisions of this Act or the statute relating to such appointments ಅಂತ ಇದೆ. ಇದನ್ನು ನೋಡಿದರೆ ಇದರಲ್ಲಿ ಒಂದು ಪೂರ್ವಾಗ್ರಹ ಇರಬೇಕು ಅಥವಾ ಇದನ್ನು ಸ್ಟ್ಯಾಚ್ಯೂಟ್‌ಗೆ ವಿರುದ್ಧವಾಗಿ ಮಾಡಿದ್ದಾರೆ ಅಂತ ಹೇಳಬಹುದು ಇಲ್ಲವೇ ಇದನ್ನು ಕಾನೂನಿಗೆ ವಿರುದ್ಧವಾಗಿ ಮಾಡಿದ್ದಾರೆ ಎಂದು ತಿಳಿದುಕೊಂಡು ಆರೀತಿ ಮಾಡಿರಬಹುದು ಎಂದು ತಿಳಿದುಕೊಳ್ಳಬೇಕಾಗುತ್ತದೆ. ಮಾನ್ಯ ಮಂತ್ರಿಗಳು ಈಬಗ್ಗೆ ಏನು ಹೇಳುತ್ತಾರೆ ?

SRI G. B. SHANKAR RAO.—Suppose he recommends a person who does not possess the requisite qualification the Government should have powers to review it.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ.—ಈ ವಿಷಯಗಳು ಸಿಂಡಿಕೇಟ್‌ಗೆ ಬರುವುದಿಲ್ಲವೆ ? ನೀವು ಬೋರ್ಡ್ ಆಫ್ ಅಪಾಯಿಂಟ್ ಅಂತ ಮಾಡಿದ್ದೀರಲ್ಲಾ ಎಲ್ಲ ವಿಷಯಗಳೂ ಸಹ ಅಲ್ಲಿಗೇನೇ ಹೋಗುತ್ತವೆಯೇ ?

SRI G. B. SHANKAR RAO.—Instead of saying board of appointment, I used the word syndicate.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ —ನಿಮಗೆ ಬೋರ್ಡ್ ಆಫ್ ಅಪಾಯಿಂಟ್‌ಮೆಂಟ್ ಮೇಲೆ ಕಾನ್ಫಿಡೆನ್ಸ್ ಇಲ್ಲದೆ ಹೋದರೆ, ಅವರೇನಾದರೂ ತಪ್ಪು ಮಾಡಿದರೆ ಅದಕ್ಕೆಲ್ಲಾ ಕೋರ್ಟು ಕಛೇರಿಗಳು ಇವೆ. ನ್ಯಾಯಾಲಯದವರು ಅದನ್ನೆಲ್ಲಾ ಸರಿ ಮಾಡುತ್ತಾರೆ. You are creating more powers that what is now.

ಶ್ರೀ ಪಿ ರಾಮದೇವ್.—ಸ್ವಾಮಿ, ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ನಾನೂ ಸಹ ೪ ವರ್ಷಗಳ ಕಾಲ ಕೆಲಸ ಮಾಡಿದ ಅನುಭವದಿಂದ ಹೇಳಬೇಕೆಂದರೆ, ಅಲ್ಲಿ ಒಂದು ದೊಡ್ಡ ರಾಕೇಟ್ ಇದೆ. ಅಪಾಯಿಂಟ್‌ಮೆಂಟ ಮಾಡಿಕೊಳ್ಳುವ ಸಮಯದಲ್ಲಿ ಮಹಾರಾಷ್ಟ್ರ ಆಂಧ್ರ ಇಲ್ಲವೇ ತಮಿಳುನಾಡಿನಿಂದ ಕರೆಸುತ್ತಾರೆ ಮತ್ತೆ ಕೆಲವು ಸಲ ಇಲ್ಲಿನವರು ಅಲ್ಲಿಗೆ ಹೋಗುತ್ತಾರೆ. ಆಗ ಅವರ ಅಭ್ಯರ್ಥಿಗಳಿಗೆ ಇವರು ಪುರಸ್ಕಾರ ಕೊಡುವುದು ಇವರ ಅಭ್ಯರ್ಥಿಗಳಿಗೆ ಅವರು ಪುರಸ್ಕಾರ ಕೊಡುವುದು ನಡೆಯುತ್ತದೆ. ಈ ಬಗ್ಗೆ ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಸಾಕಷ್ಟು ಸಲ ಚರ್ಚೆ ಕೂಡ ಆಗಿದೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ.—ಯಾವಾಗಲೂ ಕೆಲವು ವ್ಯಕ್ತಿಗಳನ್ನು ಗಮನದಲ್ಲಿಟ್ಟುಕೊಂಡು ಇಂತಹ ಶಾಸನ ಮಾಡಬಾರದು. ಮತ್ತು ರಾಜ್ಯಪಾಲರು ಈ ಬೋರ್ಡುಗಳಿಗೆ ಮತ್ತು ಸಮಿತಿಗಳಿಗೆ ನೇಮಕ ಮಾಡುವಾಗ ಅದರಲ್ಲಿ ಒಳ್ಳೆಯ ಪಾಂಡಿತ್ಯವಿರುವವರನ್ನೇ ನೇಮಕ ಮಾಡಿದರೆ ಈ ಸಮಸ್ಯೆಗಳೇ ಬರುವುದಿಲ್ಲ

ಅಲ್ಲಿರುವವರು ನಿಯಮಗಳಿಗೆ ವಿರುದ್ಧವಾಗಿ ನಡೆದು ಕೊಳ್ಳುತ್ತಾರೆಂದು ತಾವು ಭಾವಿಸುವುದಾದರೆ, ಈ ಬೋರ್ಡ್‌ ಆಫ್ ಅಪಾಯಿಂಟ್‌ಮೆಂಟ್‌ನ್ನು ತೆಗೆದುಹಾಕುವುದೇ ಒಳ್ಳೆಯದು.

SRI G. B. SHANKAR RAO.—We have given supervisory powers to the Chancellor to review the appointments made by the Board in case they violate the provisions of the Act or any injustice is done to the applicants.

ಶ್ರೀ ಹಾರನ್ನಹಳ್ಳಿ ರಾಮಸ್ವಾಮಿ.—ನಾನು ಹೇಳುವುದೇನೆಂದರೆ, ಒಂದು ಶಾಸನ ಮಾಡುವಾಗ ಒಂದು ತತ್ವಕ್ಕೆ ಒಳಪಟ್ಟು ಮಾಡಬೇಕು ಎಂದು. ಅದು ಒಂದು ಸ್ವಾಯತ್ತ ಸಂಸ್ಥೆ ಎಂದು ನಾವೆಲ್ಲರೂ ಒಪ್ಪಿಕೊಂಡ ಮೇಲೆ, ಅವರು ಮಾಡಿದ ತೀರ್ಮಾನವನ್ನು ಸರ್ಕಾರದ ಮಟ್ಟದಲ್ಲಿ ಮತ್ತೆ ಬದಲಾವಣೆ ಮಾಡಲಾಗುವುದೆಂದು ತಾವು ಹೇಳುವುದು ಸರಿಯಲ್ಲ. ಎಲ್ಲ ಅಧಿಕಾರಿಗಳನ್ನು ಒಬ್ಬರೇ ಇಟ್ಟುಕೊಳ್ಳುವುದಕ್ಕಾಗುವುದಿಲ್ಲವೆಂದುಕೊಂಡು ಈ ರೀತಿ ಸಮಿತಿ ಮತ್ತು ಬೋರ್ಡುಗಳನ್ನು ಮಾಡಿರುವುದು. ಈ ಸಮಿತಿಗಳಲ್ಲಿ ಕೆಲಸ ಮಾಡುವವರು ನೀತಿನಿಯಮಗಳನ್ನು ಅನುಸರಿಸಿಕೊಂಡು ಕೆಲಸ ಮಾಡುತ್ತಾರೆ ಮತ್ತು ನೇಮಕಗಳನ್ನು ಮಾಡುತ್ತಾರೆ. ಆ ರೀತಿ ಮಾಡಿದ ಮೇಲೂ ಸಹ, ಅದನ್ನು ಬದಲಾವಣೆ ಮಾಡುವಂತಹ ಒಂದು ಅಧಿಕಾರವನ್ನು ಕುಲಪತಿಗಳಿಗೆ ಕೊಡುವುದು ಸರಿಯಲ್ಲವೆಂದು ನಾನು ಹೇಳುತ್ತೇನೆ.

ಇಲ್ಲಿ ಇನ್ನೊಂದು ಪ್ರತಿಗಾಮಿ ತಿದ್ದುಪಡಿಯನ್ನು ತಂದಿದ್ದಾರೆ. ಅದೇನೆಂದರೆ, ವಿಶ್ವವಿದ್ಯಾನಿಲಯದವರು ಯಾವುದಾದರು ಒಂದು ಕಾಲೇಜನ್ನು ತಾವೇ ನಡೆಸುತ್ತೇವೆಂದು ಮುಂದೆ ಬಂದಾಗ, ಆ ಕಾಲೇಜನ್ನು ಅವರಿಗೆ ವಹಿಸಿಕೊಡಲು ಈ ಮೊದಲಿನ ಕಾನೂನಿನಲ್ಲಿ ಅವಕಾಶವಿತ್ತು. ಈಗ ಅದನ್ನು ತೆಗೆದುಹಾಕಿದ್ದಾರೆ. ಇಲ್ಲಿಯವರೆಗೆ ಬೇರೆಯವರಿಗೆ ಮಾರ್ಗದರ್ಶನ ಮಾಡಿ ತೋರಿಸಲು ವಿಶ್ವವಿದ್ಯಾನಿಲಯದವರು ಕೆಲವು ಕಾಲೇಜುಗಳನ್ನು ನಡೆಸುತ್ತಿದ್ದರು. ಅದರ ಪ್ರಕಾರ ಇದುವರೆಗೆ ಮಹಾರಾಜ ಕಾಲೇಜು ಮತ್ತು ಯುವರಾಜ ಕಾಲೇಜನ್ನು ವಿಶ್ವವಿದ್ಯಾನಿಲಯದವರೆ ನಡೆಸಿಕೊಂಡು ಬರುತ್ತಿದ್ದಾರೆ. ಈಗ ಇಂತಹ ಕಾಲೇಜುಗಳನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳಲು ತಿದ್ದುಪಡಿ ತಂದಿದ್ದಾರೆ. ಇದಕ್ಕೆ ಕಾರಣವೇನೆಂಬುದನ್ನು ಇಲ್ಲಿ ತಿಳಿಸಬೇಕಾಗಿತ್ತು ? ಅಂಡರ್‌-ಗ್ರಾಜ್ಯುಯೇಟ್ ಕಾಲೇಜುಗಳನ್ನು ನಡೆಸಲು ಅವರಿಗೆ ಅವಕಾಶ ಕೊಡುವುದಿಲ್ಲ ಎನ್ನುವುದಾದರೆ, ಅದನ್ನು ಇಲ್ಲಿ ಹೇಳಬೇಕಾಗಿತ್ತು. ಮತ್ತು ಈ ಒಂದು ನಿರ್ಣಯ ಮಾಡುವುದಕ್ಕೆ ಮೊದಲು ದೀರ್ಘವಾಗಿ ಯೋಚನೆ ಮಾಡಬೇಕಾಗಿತ್ತು. ಅಷ್ಟೇ ಅಲ್ಲ. ಎಲ್ಲ ವಿಶ್ವವಿದ್ಯಾನಿಲಯಗಳ ಉಪಕುಲಪತಿಗಳನ್ನು ಹಾಗೂ ಪರಿಣತರನ್ನು ಕರೆಸಿ ಚರ್ಚೆ ಮಾಡಿ, ಇದರ ಸಾಧಕಬಾಧಕಗಳ ಬಗ್ಗೆ ಯೋಚನೆ ಮಾಡಿ ನಂತರ ಒಂದು ನಿರ್ಣಯ ತೆಗೆದುಕೊಳ್ಳಬೇಕಾಗಿತ್ತು. ಈ ರೀತಿ ಮಾಡದೆ ಅವರು ನಡೆಸುವ ಕಾಲೇಜುಗಳನ್ನು ವಾಪಸ್ ಸರ್ಕಾರದ ವಶಕ್ಕೆ ತೆಗೆದುಕೊಳ್ಳುತ್ತಿರುವುದು ಸರಿಯಲ್ಲ. ಈ ತಿದ್ದುಪಡಿಯ ಕಾರಣದಿಂದ ಮುಂದೆ ವಿಶ್ವವಿದ್ಯಾನಿಲಯದವರೇನಾದರು ಒಂದು ಕಾಲೇಜನ್ನು ನಡೆಸುತ್ತೇವೆಂದು ಮುಂದೆ ಬಂದರೆ, ಅವರಿಗೆ ವಹಿಸಿಕೊಡಲು ಸಾಧ್ಯವಾಗುವುದಿಲ್ಲ. ಒಟ್ಟಿನಲ್ಲಿ ಈ ಒಂದು ತಿದ್ದುಪಡಿಯ ಅಗತ್ಯವಿಲ್ಲವೆಂದು ಹೇಳುತ್ತೇನೆ. ಒಂದುವೇಳೆ ಅವರೇ ಮುಂದೆ ಬಂದು ಕಾಲೇಜುಗಳನ್ನು ಸರ್ಕಾರಕ್ಕೆ ವಹಿಸಿಕೊಡುತ್ತೇವೆಂದು ಹೇಳಿದಾಗ ಸರ್ಕಾರ ಅಂತಹ ಕಾಲೇಜುಗಳನ್ನು ವಹಿಸಿಕೊಂಡಿದ್ದರೆ ಚೆನ್ನಾಗಿರುತ್ತಿತ್ತು. ಆದರೆ ಈಗಿನ ಈ ಒಂದು ತಿದ್ದುಪಡಿಯಿಂದ ಸರ್ಕಾರಕ್ಕೆ ನಾನಾ ಸಮಸ್ಯೆಗಳು ಸಹ ಬರುತ್ತವೆ. ಉಪಾಧ್ಯಾಯರುಗಳು ಸರ್ಕಾರದ ಮುಂದೆ ನಾನಾ ಸಮಸ್ಯೆಗಳನ್ನು ತರುತ್ತಾರೆ. ಈಗಾಗಲೇ ಅವರ ಸಮಸ್ಯೆಗಳು ಬೇಕಾದಷ್ಟು ಇವೆ. ಇವುಗಳ ಜೊತೆಗೆ ಇನ್ನೂ ಕೆಲವು ಸಮಸ್ಯೆಗಳನ್ನು ಸರ್ಕಾರ ತನ್ನ ತಲೆ ಮೇಲೆ ಹೊತ್ತುಕೊಳ್ಳಬೇಕಾಗುತ್ತದೆ. ಸೀನಿಯಾರಿಟಿ ಪ್ರಶ್ನೆ ಪ್ರಮೋಷನ್ ಪ್ರಶ್ನೆ ಇವೆಲ್ಲಾ ಬರುತ್ತವೆ. ರಾಜ್ಯಪುನರ್ವಿಂಗಡಣೆಯಾದಾಗ ಸರ್ಕಾರೀ ನೌಕರರ ಸೀನಿಯಾರಿಟಿ ಪ್ರಶ್ನೆಯನ್ನು ಬಗೆಹರಿಸಲು ಬಹಳ ವರ್ಷಗಳು ಬೇಕಾಯಿತು. ಅದೇರೀತಿ ಈಗ ಸರ್ಕಾರದವರು ಏನಾದರೂ ವಿಶ್ವವಿದ್ಯಾನಿಲಯದವರು ನಡೆಸುತ್ತಿರುವ ಕಾಲೇಜುಗಳನ್ನು ವಹಿಸಿಕೊಂಡರೆ, ಈಗ ಸರ್ಕಾರದವರು ನಡೆಸುತ್ತಿರುವ ಕಾಲೇಜುಗಳಲ್ಲಿ ಕೆಲಸ ಮಾಡುತ್ತಿರುವ ಉಪಾಧ್ಯಾಯರುಗಳು ತಮ್ಮ ಸೀನಿಯಾರಿಟಿಗೆ ಧಕ್ಕೆ ಬರುತ್ತದೆಂದು ವಾದ ಮಾಡಬಹುದು. ಒಟ್ಟಿನಲ್ಲಿ ಸರ್ಕಾರದವರು ಎಲ್ಲರ ವಿರೋಧವನ್ನು ಕಟ್ಟಿಕೊಳ್ಳಬೇಕಾಗುತ್ತದೆ. ಒಟ್ಟಿನಲ್ಲಿ ಈ ತಿದ್ದುಪಡಿಯಿಂದ ನಾನಾ ತಾಪತ್ರಯಗಳು ಬರುವುದರಿಂದ, ಸರ್ಕಾರದವರು ಇದರ ಬಗ್ಗೆ ಮತ್ತೆ ಯೋಚನೆ ಮಾಡುವುದು ಒಳ್ಳೆಯದೆಂದು ಹೇಳುತ್ತೇನೆ.

ಶ್ರೀ ಜಿ. ಬಿ. ಶಂಕರ್‌ರಾವ್.—ಸೀನಿಯಾರಿಟಿಯನ್ನು ನಾವು ಪ್ರೊಟೆಕ್ಟ್ ಮಾಡುತ್ತೇವೆ.

ಶ್ರೀ ಹಾರ್‍ನಳ್ಳಿ ರಾಮಸ್ವಾಮಿ.—ಇನ್ನು ೨೦ನೇ ವಿಧಿಯಲ್ಲಿ ಈ ಹೊಸ ವಿಶ್ವವಿದ್ಯಾನಿಲಯಗಳಿಗೆ ಸಂಬಂಧಪಟ್ಟಂತೆ ಸೆನೆಟ್ ಹಾಗೂ ಸಿಂಡಿಕೇಟ್‌ಗಳನ್ನು ಒಂದು ವರ್ಷದಲ್ಲಿ ರಚನೆ ಮಾಡಬೇಕೆಂದು ಹೇಳಿದ್ದೀರಿ. ಈ ಮೊದಲು ಮೂರು ಸಲ ಇದೇ ವಿಷಯದಲ್ಲಿ ವಿಶ್ವವಿದ್ಯಾನಿಲಯ ಮಸೂದೆ ತಿದ್ದುಪಡಿ ಮಾಡಬೇಕಾಗಿ ಬಂತು. ಇದಕ್ಕೆ ಕಾರಣ ಚುನಾವಣೆ ಸಂಬಂಧದಲ್ಲಿ ಕೆಲವರು ಕೋರ್ಟಿಗೆ ಹೋದ ಕಾರಣ. ಅಲ್ಲಿ ತೀರ್ಮಾನವಾಗಿ ಮತ್ತೆ ಚುನಾವಣೆ ಆಗಲು ವರ್ಷಗಟ್ಟಲೆ ಹಿಡಿಯಿತು. ಇಲ್ಲಿ ಒಂದು ವರ್ಷದಲ್ಲಿ ಚುನಾವಣೆ ಆಗಬೇಕೆಂದು ಹೇಳಿದ್ದೀರಿ. ಅಷ್ಟರಲ್ಲಿ ಆಗದಿದ್ದರೆ ಮತ್ತೆ ತಿದ್ದುಪಡಿ ತರಬೇಕಾಗುತ್ತದೆ. ಆದಕಾರಣ ಇದಕ್ಕೆ ಹೆಚ್ಚು ಕಾಲಾವಕಾಶವನ್ನು ಕೊಡುವುದು ಒಳ್ಳೆಯದು. ಆದ್ದರಿಂದ ಒಂದು ವರ್ಷಕ್ಕೆ ಬದಲು ಎರಡು ವರ್ಷಗಳು ಎಂದು ಈಗಲೇ ತಿದ್ದುಪಡಿ ಮಾಡುವುದು ಒಳ್ಳೆಯದು.

ಇನ್ನು ಎರಡು ಹೊಸ ವಿಶ್ವವಿದ್ಯಾನಿಲಯಗಳನ್ನು ಸ್ಥಾಪನೆ ಮಾಡಲು ಅವಶ್ಯಕವಾದಂಥ ತಿದ್ದುಪಡಿಗಳನ್ನು ಇಲ್ಲಿ ತಂದಿದ್ದರೆ ಸಾಕಾಗಿತ್ತು. ಆದರೆ ಇಲ್ಲಿ ಇತರೇ ಕೆಲವು ಅಂಶಗಳನ್ನು ಸೇರಿಸಲಾಗಿದೆ. ಇದರ ಅಗತ್ಯವಿರಲಿಲ್ಲ. ಇದರ ಬದಲು ಕೊಠಾರಿ ಕಮಿಷನ್ ಅವರು ಏನೇನು ಸಲಹೆಗಳನ್ನು ಮಾಡಿದ್ದಾರೆ. ಅವನ್ನೆಲ್ಲಾ ಆಧಾರವಾಗಿಟ್ಟುಕೊಂಡು ಒಂದು ಸಮಗ್ರವಾದಂಥ ತಿದ್ದುಪಡಿ ಮಸೊದೆಯನ್ನು ತಂದಿದ್ದರೆ ಚೆನ್ನಾಗಿರುತ್ತಿತ್ತು. ಆ ರೀತಿ ಮಾಡದೆ ಅನಾವಶ್ಯಕವಾದಂಥ ಕೆಲವು ಅಂಶಗಳನ್ನು ಇಲ್ಲಿ ಸೇರಿಸಿರುವುದು ಸರಿಯಲ್ಲವೆಂಬುದು ನನ್ನ ಭಾವನೆ.

೧೧-೦೦ ಎ. ಎಂ.

ಮುಖ್ಯವಾಗಿ ಸರ್ಕಾರದವರು ಈ ವಿಶ್ವವಿದ್ಯಾನಿಲಯದ ಕಾಲೇಜುಗಳನ್ನು ತಮ್ಮ ವಶಕ್ಕೆ ತೆಗೆದುಕೊಳ್ಳುವುದರಲ್ಲಿ ಏನು ಅರ್ಥವಿದೆ ? ಅವು ನೂರಾರು ವರ್ಷಗಳಿಂದ ಚೆನ್ನಾಗಿ ನಡೆಯುತ್ತಿವೆ. ಆದ್ದರಿಂದ ಅವುಗಳನ್ನು ತೆಗೆದುಕೊಳ್ಳತಕ್ಕಂಥ ಅಗತ್ಯವಿರಲಿಲ್ಲ. ಯಾವ ಉದ್ದೇಶದಿಂದ ಇದನ್ನು ಆತುರವಾಗಿ ತೆಗೆದುಕೊಂಡಿದ್ದಾರೆ ಎಂಬ ಬಗ್ಗೆ ವಿವರಣೆಯನ್ನು ಕೊಡಬೇಕಾಗಿತ್ತು. ಆದರೆ ಇಲ್ಲಿ ಕೊಟ್ಟಿಲ್ಲ ಸರ್ಕಾರದವರು ಇದರಲ್ಲಿ ಅನಾವಶ್ಯಕವಾದ ತಿದ್ದುಪಡಿಗಳನ್ನು ಕೈಬಿಟ್ಟು ಕೇವಲ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡುವುದಕ್ಕೆ ಸಂಬಂಧಪಟ್ಟ ವಿಷಯಗಳನ್ನು ಉಳಿಸಿಕೊಂಡು, ಇದನ್ನು ಜಾರಿಗೆ ತರಲಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ಎನ್. ಕೆಂಗೇಗೌಡ (ಚಾಮರಾಜ).—ಮಾನ್ಯ ಅಧ್ಯಕ್ಷರೇ, ಈಗ ಇಲ್ಲಿ ಮಾನ್ಯ ವಿದ್ಯಾಮಂತ್ರಿಯವರು ತಂದಿರತಕ್ಕಂಥ ಕರ್ನಾಟಕ ರಾಜ್ಯದ ಯೂನಿವರ್ಸಿಟಿ ತಿದ್ದುಪಡಿ ಮಸೂದೆಯನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ಇದನ್ನು ಸ್ವಾಗತಿಸುತ್ತಾ ಕೆಲವಾರು ವಿಷಯಗಳ ಬಗ್ಗೆ ನಾನು ಮಾತನಾಡುವುದಕ್ಕೆ ಇಚ್ಛೆಪಡುತ್ತೇನೆ. ಸರ್ಕಾರದವರು ಗುಲ್ಬರ್ಗ ಮತ್ತು ಮಂಗಳೂರು ಯೂನಿವರ್ಸಿಟಿಗಳನ್ನು ರಾಜ್ಯದಲ್ಲಿ ಸ್ಥಾಪನೆ ಮಾಡುವ ದಿಕ್ಕಿನಲ್ಲಿ ಈ ಒಂದು ಮಸೂದೆ ಇಲ್ಲಿ ಚರ್ಚೆಗೆ ಬಂದಿದೆ. ನಿಜವಾಗಿಯೂ ಕೂಡ ಬಹಳ ಹಿಂದುಳಿದಿರತಕ್ಕಂಥ ಈ ಗುಲ್ಬರ್ಗದಲ್ಲಿ ಹರಿಜನ ಗಿರಿಜನರು ಹೆಚ್ಚಿಗೆ ವಾಸ ಮಾಡತಕ್ಕಂಥ ಈ ಒಂದು ಪ್ರದೇಶದಲ್ಲಿ ಈ ಯೂನಿವರ್ಸಿಟಿಯನ್ನು ಸ್ಥಾಪನೆ ಮಾಡತಕ್ಕಂಥಾದ್ದು ಬಹಳ ಸ್ವಾಗತಾರ್ಹವಾದ ವಿಚಾರ ಎನ್ನತಕ್ಕಂಥದನ್ನು ಎಲ್ಲಾ ಮಾನ್ಯ ಸದಸ್ಯರು ಒಪ್ಪುತ್ತಾರೆ. ಹಾಗೆಯೇ ಈ ಕೊಡಗು ಮತ್ತು ಮಂಗಳೂರಿನವರಿಗೆ ಅನುಕೂಲವಾಗುವಂತೆ ಮಂಗಳೂರಿನಲ್ಲಿ ಒಂದು ವಿಶ್ವವಿದ್ಯಾನಿಲಯ ಆಗಬೇಕಾಗಿತ್ತು. ಅದು ಕೂಡ ಈ ಮಸೂದೆಯಿಂದ ಆಗುತ್ತಾ ಇದೆ. ಅದನ್ನು ಅಲ್ಲಿ ಸ್ಥಾಪನೆ ಮಾಡತಕ್ಕಂಥಾದ್ದನ್ನು ಮಾನ್ಯ ಹಾರ್‍ನಳ್ಳಿ ರಾಮಸ್ವಾಮಿಯವರು ಸಹ ಸ್ವಾಗತಿಸಿದ್ದಾರೆ. ಅದನ್ನು ನಾನು ಪುಷ್ಟೀಕರಿಸಿ ಮಾತನಾಡಿ ಅದು ಒಳ್ಳೆಯದೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಶ್ರೀಮಾನ್ ರಾಮಸ್ವಾಮಿಯವರು ೧೨ನೇ ಕ್ಲಾಜ್‌ನಲ್ಲಿ ಒರಿಜಿನಲ್ ಸೆಕ್ಷನ್ ೪೯ಕ್ಕೆ ತಿದ್ದುಪಡಿ ಮಾಡಿರತಕ್ಕಂಥಾದ್ದು ಸರಿಯಲ್ಲವೆಂದು ಹೇಳಿದ್ದಾರೆ. ಆ ವಾದವನ್ನು ನಾನು ಒಪ್ಪುವುದಿಲ್ಲ. ಏಕೆಂದರೆ ಇದರಲ್ಲಿ ತಪ್ಪು ಮಾಡಿದಮೇಲೆ ನಾವು ಕೋರ್ಟಿಗೆ ಹೋಗಿ ಸರಿಪಡಿಸಿಕೊಳ್ಳುವುದಕ್ಕೆ ಬರುತ್ತದೆ ಎನ್ನತಕ್ಕಂಥಾ ವಾದ ಸರಿಯಲ್ಲ ಎಂದು ನಾನು ಅವರಿಗೆ ಹೇಳುತ್ತೇನೆ ನಾವು ಆದಷ್ಟು ಮೊದಲೇ ಅದನ್ನು ಸರಿ ಮಾಡತಕ್ಕಂಥಾದ್ದು ಸೂಕ್ತ. ಇದರಲ್ಲಿ ರಿವ್ಯೂ ಪವರನ್ನು ಚಾನ್ಸಲರ್‌ಗೆ ಕೊಟ್ಟಿದ್ದಾರೆ. ಈ ಮಸೂದೆಯಲ್ಲಿ ಪ್ರಾವಿಷನ್ಸ್ ಏನಿದೆ ಅದಕ್ಕೆ ವಿರುದ್ಧವಾಗಿ ಅಪಾಯಿಂಟ್‌ಮೆಂಟ್ಸ್ ಆದ ಪಕ್ಷದಲ್ಲಿ

ಚಾನ್ಸಲರ್ ಅದನ್ನು ರಿವ್ಯೂ ಮಾಡಿ ಅಪಾಯಿಂಟ್‌ಮೆಂಟ್ಸ್ ಮಾಡಬಹುದು ಎನ್ನತಕ್ಕಂಥಾ ತಿದ್ದುಪಡಿ ಇಲ್ಲಿ ಬಂದಿದೆ. ಇದು ಒಳ್ಳೆಯದು. ಆದಕಾರಣ ಅವರ ವಾದವನ್ನು ಒಪ್ಪತಕ್ಕಂಥ ಸಂದರ್ಭ ಇಲ್ಲಿ ಬರುವುದಿಲ್ಲವೆಂದು ನಾನು ಹೇಳುತ್ತೇನೆ. ಇನ್ನೊಂದು ವಿಷಯದಲ್ಲಿ ಅಂದರೆ ೬ನೇ ಕ್ಲಾಜ್ ಸೆಕ್ಷನ್ ೬೮ರ ಬಗ್ಗೆ ಅವರು ಹೇಳಿರತಕ್ಕಂಥಾ ವಾದವನ್ನು ಒಪ್ಪತಕ್ಕಂಥ ಸಂದರ್ಭ ಇದೆ. ನಾನು ಮೈಸೂರಿನಿಂದ ಇಲ್ಲಿಗೆ ಬರುತ್ತಿದ್ದೇನೆ ; ಮೈಸೂರು ಯೂನಿವರ್ಸಿಟಿಯಲ್ಲಿ ನಾನು ಓದಿದಂಥವನು. ಮೈಸೂರು ಯೂನಿವರ್ಸಿಟಿಯಲ್ಲಿ ಮಹಾರಾಜ ಕಾಲೇಜ್ ಮತ್ತು ಯುವರಾಜ ಕಾಲೇಜ್ ಬರುತ್ತವೆ. ಯುವರಾಜ ಕಾಲೇಜ್ ಮೊದಲಿಗೆ ಅಂದರೆ ೧೯೬೫ನೇ ಇಸವಿಯಲ್ಲಿ ಇಂಟರ್‌ಮೀಡಿಯೇಟ್ ಕಾಲೇಜ್ ಆಗಿತ್ತು. ಈಗ ಡೇ ಕಾಲೇಜ್ ಮತ್ತು ಈವನಿಂಗ್ ಕಾಲೇಜ್ ಎಂದು ಮಾಡಿಕೊಂಡಿದ್ದಾರೆ. ಇವು ಜನರ ವಿದ್ಯಾಭ್ಯಾಸಕ್ಕೆ ಬಹಳ ಸಹಾಯ ಮಾಡಿವೆ. ಈ ಕಾಲೇಜುಗಳನ್ನು ಮಾದರಿ ಕಾಲೇಜುಗಳನ್ನಾಗಿ ಮಾಡಬೇಕು ಮತ್ತು ಈ ಕಾಲೇಜುಗಳನ್ನು ಬಹಳ ಉನ್ನತ ಮಟ್ಟದಲ್ಲಿ ಅಭಿವೃದ್ಧಿ ಮಾಡಬೇಕು ಎನ್ನತಕ್ಕಂಥ ಉದ್ದೇಶದಿಂದ ಈ ಕಾಲೇಜುಗಳನ್ನು ಯೂನಿವರ್ಸಿಟಿಯವರು ವಹಿಸಿಕೊಂಡಿದ್ದಾರೆ. ಸಂದರ್ಭ ಬಂದರೆ ಈ ಕಾಲೇಜುಗಳನ್ನು ಇನ್ ಕನ್ಸಲ್‌ಟೇಷನ್ ವಿತ್ ದಿ ಸಿಂಡಿಕೇಟ್ ಸರ್ಕಾರಕ್ಕೆ ವಹಿಸಿಕೊಳ್ಳಬಹುದು ಎಂದು ಇಲ್ಲಿ ಹೇಳಿದ್ದಾರೆ. ಯಾವುದೇ ಕಾರಣಕ್ಕಾಗಿ ಯೂನಿವರ್ಸಿಟಿಯವರನ್ನು ಈ ಬಗ್ಗೆ ರಿಕ್ವೆಸ್ಟ್ ಮಾಡಿದರೆ ಅವರು ಅದನ್ನು ಸರ್ಕಾರಕ್ಕೆ ವಹಿಸತಕ್ಕಂಥ ಸಂದರ್ಭ ಉಂಟಾಗುತ್ತದೆ. ಅದು ಸರಿ. ಆದರೆ ಸಿಂಡಿಕೇಟನ್ನು ಕನ್‌ಸಲ್ಟ್ ಮಾಡಿ ಕಾಲೇಜುಗಳನ್ನು ಸರ್ಕಾರ ವಹಿಸಿಕೊಳ್ಳತಕ್ಕಂಥಾದ್ದು ಸರಿಯಲ್ಲ. ಆದರೆ ಅವರ ತೀರ್ಮಾನದಂತೆ ಅದು ಆಗಬಾರದು ಎನ್ನತಕ್ಕಂಥ ವಾದವನ್ನು ನಾನು ಒಪ್ಪುತ್ತೇನೆ. ಯೂನಿವರ್ಸಿಟಿಯವರು ಯಾವುದಾದರೂ ಕಾರಣದಿಂದ ನಾವು ಈ ಕಾಲೇಜುಗಳನ್ನು ನಡೆಸುವುದಕ್ಕಾಗುವುದಿಲ್ಲ, ಸರ್ಕಾರದವರು ತೆಗೆದುಕೊಂಡು ನಡೆಸಲಿ ಎಂದು ಹೇಳುವಂಥ ಸಂದರ್ಭ ಉಂಟಾದರೆ ಆಗ ಅದಕ್ಕೆ ಪ್ರಾವಿಷನ್ ಮಾಡಿಕೊಳ್ಳಬಹುದು. ಇದರಲ್ಲಿ ಸಿಂಡಿಕೇಟನ್ನು ಕನ್‌ಸಲ್ಟ್ ಮಾಡಿ ಕಾಲೇಜುಗಳನ್ನು ವಹಿಸಿಕೊಳ್ಳತಕ್ಕಂಥದ್ದು ಆಗಲಾರದು ಆದ್ದರಿಂದ ನಾನು ಈ ತಿದ್ದುಪಡಿಯನ್ನು ವಿರೋಧಿಸುತ್ತೇನೆ. ನಮ್ಮ ಯೂನಿವರ್ಸಿಟಿಯಲ್ಲಿ ಏನು ಒಂದು ಧೋರಣೆ ಇದೆಯೆಂದರೆ ಈ ಯುವರಾಜ ಕಾಲೇಜ್ ಮತ್ತು ಮಹಾರಾಜ ಕಾಲೇಜ್ ರಾಜ್ಯದಲ್ಲಿ ಬಹಳ ಮಾದರಿಯಾಗಿ ನಡೆಯಬೇಕು. ಬಹಳ ಉನ್ನತಮಟ್ಟದಲ್ಲಿ ಅವುಗಳನ್ನು ಅಭಿವೃದ್ಧಿ ಮಾಡಬೇಕು ಎನ್ನತಕ್ಕಂಥ ಧೋರಣೆಯಿಂದ ಅವರೇ ಈ ಕಾಲೇಜು ಇಟ್ಟುಕೊಂಡಿರುತ್ತಾರೆ. ಹೀಗಿರುವಾಗ ಸಿಂಡಿಕೇಟ್ ಕನ್ಸಲ್‌ಟೇಷನ್ ಮುಖಾಂತರ ಸರ್ಕಾರ ತೆಗೆದುಕೊಳ್ಳುತ್ತಾರೆಂದರೆ ಅದು ಆ ಧೋರಣೆಗೆ ವಿರುದ್ಧವಾಗುತ್ತದೆ. ಈ ಬಗ್ಗೆ ನನ್ನನ್ನು ಕೇಳಿದರೆ ಯೂನಿವರ್ಸಿಟಿಯವರು ಸರ್ಕಾರವನ್ನು ರಿಕ್ವೆಸ್ಟ್ ಮಾಡಿಕೊಂಡರೆ ಮಾತ್ರ ಕಾಲೇಜುಗಳನ್ನು ತಮ್ಮ ವಶಕ್ಕೆ ತೆಗೆದುಕೊಳ್ಳಬೇಕು; ಸುಯೋ ಮೋಟೋದಿಂದ ತೆಗೆದುಕೊಳ್ಳತಕ್ಕಂಥ ಸಂದರ್ಭ ಉಂಟಾಗಬಾರದು ಎಂದು ಹೇಳುತ್ತೇನೆ. ಇನ್ನು ಕ್ಲಾಜ್ ೧೬(೪)ರಲ್ಲಿ ಸರ್ವೀಸ್ ಮ್ಯಾಟರ್ಸ್ ಬಗ್ಗೆ ಹೇಳಿದ್ದಾರೆ. ಯೂನಿವರ್ಸಿಟಿಯಲ್ಲಿ, ಕಾಲೇಜ್‌ಗಳಲ್ಲಿ ಲೆಕ್ಚರರ್‌ಗಳು, ಉಪಾಧ್ಯಾಯರು, ಪ್ರಾಧ್ಯಾಪಕರು ಕೆಲಸ ಮಾಡುತ್ತಾರೆ. ಅವುಗಳಲ್ಲಿ ಕೆಲವು ಹುದ್ದೆಗಳು ಗೆಜೆಟೆಡ್ ರ್‍ಯಾಂಕ್ ಹುದ್ದೆಗಳು ಎಂಬುದು ಎಲ್ಲರಿಗೂ ಗೊತ್ತು. ಈ ಸರ್ಕಾರಿ ಕಾಲೇಜ್‌ಗಳಲ್ಲಿ ಯಾರಾದರೂ ಒಂದು ವರ್ಷದ ಹಿಂದೆ ಲೆಕ್ಚರರ್ ಆಗಿ ಅಪಾಯಿಂಟ್ ಆಗಿದ್ದರೆ ಅವರು ಮುಂದೆ ಗೆಜೆಟೆಡ್ ರ್‍ಯಾಂಕ್ ಆಫೀಸರ್ ಆಗುತ್ತಾರೆ. ಅವರ ಕೈ ಕೆಳಗೆ ಈ ಯೂನಿವರ್ಸಿಟಿ ಕಾಲೇಜುಗಳನ್ನು ನೀವು ವಹಿಸಿಕೊಳ್ಳುವುದಾದರೆ ಅಲ್ಲಿರತಕ್ಕಂಥ ೧೫ ವರ್ಷ, ೨೦ ವರ್ಷ ಸರ್ವೀಸ್ ಆಗಿರತಕ್ಕಂಥ ಲೆಕ್ಚರರ್ಸ್, ಈ ಸರ್ಕಾರಿ ಕಾಲೇಜ್‌ನಲ್ಲಿ ಒಂದು ವರ್ಷದ ಹಿಂದೆ ಅಪಾಯಿಂಟ್ ಆಗಿರತಕ್ಕಂಥ ಲೆಕ್ಚರರ್‌ಗಿಂತ ಜೂನಿಯರ್ ಆಗುತ್ತಾರೆ. ಈ ಒಂದು ಅನಾಮಲಿ ಬರುತ್ತದೆ. ಇದಕ್ಕೆ ಸೂಕ್ತವಾದ ಪರಿಹಾರವನ್ನು ಈ ಮಸೂದೆಯಲ್ಲಿ ತೋರಿಸಿಲ್ಲ. ಅದೂ ಕೂಡ ಈ ಕ್ಲಾಸನ್ನು ಡಿಲೀಟ್ ಮಾಡುವುದಕ್ಕೆ ಸಹಾಯ ಮಾಡುತ್ತದೆ. ಇದು ಬೇಕಿಲ್ಲ ಎಂದು ನನ್ನ ಸಲಹೆಯನ್ನು ಈ ಸಭೆಯ ಮುಂದಿಡುವುದಕ್ಕೆ ನಾನು ಇಚ್ಛೆಪಡುತ್ತೇನೆ. ಶ್ರೀಮಾನ್ ರಾಮಸ್ವಾಮಿಯವರು ಈ ಮಸೂದೆ ಕೇವಲ ೨ ಯೂನಿವರ್ಸಿಟಿಯನ್ನು ಸ್ಥಾಪನೆ ಮಾಡುವ ಉದ್ದೇಶಕ್ಕೋಸ್ಕರ ತಂದಿದ್ದಾರೆ, ಇದು ಸ್ವಾಗತಾರ್ಹವಾದದ್ದು ಎಂದು ಹೇಳಿದ್ದಾರೆ. ಅದನ್ನು ನಾನು ಪೂರ್ಣವಾಗಿ ಒಪ್ಪುವುದಿಲ್ಲ. ಇದರಲ್ಲಿ ಕೆಲವಾದರೂ ವಾಸ್ತವಾಂಶಗಳು ಇದೆ, ಇದನ್ನು ಸಮಗ್ರವಾಗಿ ಆಚರಣೆಗೆ ತರುವಾಗ ಅವುಗಳಿಂದ ನಮಗೆ ಸಹಾಯಕವಾಗುತ್ತದೆ. ಇದರಲ್ಲಿ ಕ್ಲಾಜ್ ೧೨ ರ ಸೆಕ್ಷನ್ ೪೯(ಎ) ತಿದ್ದುಪಡಿ ಏನಿದೆ ಇದರ ಅವಶ್ಯಕತೆ ಇದೆಯೆಂದು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಅಮೆಂಡ್‌ಮೆಂಟ್ ಆಫ್ ಸೆಕ್ಷನ್ ೧೯ ಏನಿದೆ ಇದರ ಬಗ್ಗೆ

ಶ್ರೀ ರಾಮಸ್ವಾಮಿಯವರು ಹೇಳಿರತಕ್ಕಂಥ ವಾದವನ್ನು ನಾನು ನಿಜವಾಗಿಯೂ ಒಪ್ಪುವುದಿಲ್ಲ. ಅದರ ಅವಶ್ಯಕತೆ ಇದೆಯೆಂದು ಹೇಳುವುದಕ್ಕೆ ನಾನು ಇಚ್ಛೆಪಡುತ್ತೇನೆ.

ಮತ್ತೆ ಈ ಸರ್ವೀಸ್ ಮ್ಯಾಟರ್ಸ್ ಬಗ್ಗೆ ನಾನು ಈಗಾಗಲೇ ಹೇಳಿದ್ದೇನೆ. ೧೫–೨೦ ವರ್ಷ ಸರ್ವೀಸ್ ಮಾಡಿರತಕ್ಕವರ ಮೇಲೆ ಒಂದು ವರ್ಷ, ಎರಡು ವರ್ಷಗಳಲ್ಲಿ ಅಪಾಯಿಂಟ್ ಆಗಿರತಕ್ಕವರು ಬರುತ್ತಾರೆ. ವಿಶ್ವವಿದ್ಯಾನಿಲಯದಲ್ಲಿ ಯಾರು ಲೆಕ್ಚರರ್ಸ್ ಇರುತ್ತಾರೆ, ಅವರ ಮೇಲೆ ಅಂದರೆ ಗುರುಗಳ ಮೇಲೆ ವಿದ್ಯಾರ್ಥಿಗಳು ಸೀನಿಯರ್ಸ್ ಆಗತಕ್ಕ ಸಂದರ್ಭ ಉಂಟಾಗುತ್ತದೆ. ಇದನ್ನು ಸರಿಪಡಿಸುವುದಕ್ಕೆ ಅವಕಾಶವಿರಬೇಕು. ಸೀನಿಯಾರಿಟಿ ಲಿಸ್ಟ್, ಹೈದರಾಬಾದ್ ಕರ್ನಾಟಕದ್ದಾಗಲಿ, ಬಾಂಬೆ ಕರ್ನಾಟಕ ಏರಿಯಾದ್ದಾಗಲಿ ಇವುಗಳ ಕೇಸುಗಳೇ ಇನ್ನೂ ಸಮರ್ಪಕವಾಗಿ ತೀರ್ಮಾನವಾಗಿಲ್ಲ. ಈಗ ಇನ್ನೊಂದು ಪ್ರಕರಣ ಈ ರೀತಿ ಬರತಕ್ಕಂಥಾದ್ದು ಸರಿಯಲ್ಲ. ಆ ದೃಷ್ಟಿಯಿಂದಲೂ ತಾವು ಯೂನಿವರ್ಸಿಟಿ ಕಾಲೇಜುಗಳನ್ನು ತೆಗೆದುಕೊಳ್ಳತಕ್ಕಂಥಾದ್ದು ಸರಿಯಲ್ಲ. ಯೂನಿವರ್ಸಿಟಿಯವರು ಇಲ್ಲಿಯವರೆಗೆ ಯಾವ ಕಾಲೇಜುಗಳನ್ನು ನಡೆಸುತ್ತಾ ಇದ್ದಾರೆ, ಆ ಕಾಲೇಜುಗಳಿಗೂ ಸರ್ಕಾರದವರು ನಡೆಸತಕ್ಕ ಕಾಲೇಜುಗಳಿಗೂ ಹೋಲಿಕೆ ಮಾಡಿದರೆ ಇವುಗಳ ಕೆಲಸ ಕಾರ್ಯಗಳು ಉತ್ತಮ ದರ್ಜೆಯಲ್ಲಿ ನಡೆದಿವೆ, ಆ ಒಂದು ಅಭಿಪ್ರಾಯವನ್ನು ಇದೆ. ಇದೇ ಒಂದು ಸ್ಟೇಟಸ್ಸನ್ನು ಮುಂದೆಯೂ ಕೂಡ ಉಳಿಸಿಕೊಂಡು ಬರುತ್ತಾರೆ ಎನ್ನತಕ್ಕ ದೃಷ್ಟಿಯಿಂದಲೂ ಸಹ ಈ ಒಂದು ಕ್ಲಾಜಿನ ಅವಶ್ಯಕತೆ ಇಲ್ಲ ಎಂದು ಹೇಳಿ ಸರ್ಕಾರದವರು ತಂದಿರತಕ್ಕ ಈ ಒಂದು ಮಸೂದೆ ಏನಿದೆ ಇದು ನಿಜವಾಗಲೂ ಚೆನ್ನಾಗಿದೆ, ಎಲ್ಲರಿಂದಲೂ ಸ್ವಾಗತಾರ್ಹವಾದುದು. ಆ ದೃಷ್ಟಿಯಿಂದ ಈ ಮಸೂದೆಯನ್ನು ಮತ್ತೊಮ್ಮೆ ಸ್ವಾಗತಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಚ್. ಗಂಗಾಧರನ್ (ಕೃಷ್ಣರಾಜ).—ಮಾನ್ಯ ಉಪಾಧ್ಯಕ್ಷರೇ, ಸರ್ಕಾರದವರು ತಂದಿರತಕ್ಕ ಈ ಮಸೂದೆಯನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ ಇದಕ್ಕೆ ಕಾರಣ ನನ್ನ ಕನ್ನಡ ನಾಡಿಗೆ ಇನ್ನೂ ಎರಡು ವಿಶ್ವವಿದ್ಯಾನಿಲಯಗಳು ಹೆಚ್ಚಾಗಿ ಬರತಕ್ಕಂಥಾದ್ದು ವಿದ್ಯಾ ಪ್ರಗತಿಯ ದ್ಯೋತಕವಾಗಿದೆ. ಆ ಕಾರಣದಿಂದ ಇದನ್ನು ಸ್ವಾಗತಿಸುತ್ತಾ ಇದ್ದೇನೆ. ಆದರೆ ಇದರಲ್ಲಿ ಲೋಪದೋಷಗಳು ಇಲ್ಲ ಎನ್ನುವ ಭಾವನೆ ಇಲ್ಲ. ಆದರೂ ಸ್ವಾಗತಾರ್ಹವಾದ ಕೆಲಸವನ್ನು ಮಾಡಿದ್ದೀರಿ, ಆದುದರಿಂದ ಸರ್ಕಾರಕ್ಕೆ ಧನ್ಯವಾದಗಳನ್ನರ್ಪಿಸಬೇಕಾಗಿದೆ. ನನ್ನ ಮಿತ್ರರಾದಂಥ ರಾಮಸ್ವಾಮಿಯವರು ಇನ್ನೂ ಒಂದು ಟೆಕ್ನಿಕಲ್ ಯೂನಿವರ್ಸಿಟಿ ಆಗಬೇಕು ಎಂದು ಹೇಳಿದರು. ಇದಿಷ್ಟೇ ಅಲ್ಲ ಕರ್ನಾಟಕ ರಾಜ್ಯವು ಸರ್ವ ಸೌಭಾಗ್ಯ ಇಗತಕ್ಕಂಥ ಕ್ಷೇತ್ರವಾಗಿರುವುದರಿಂದ ಇನ್ನೂ ಹೆಚ್ಚಿನ ಮೂರು ವಿಶ್ವವಿದ್ಯಾನಿಲಯಗಳ ಅವಶ್ಯಕತೆ ಇದೆ. ಒಂದು ಟೆಕ್ನಿಕಲ್ ಯೂನಿವರ್ಸಿಟಿ, ಒಂದು ಮೆಡಿಕಲ್ ಯೂನಿವರ್ಸಿಟಿ. ಒಂದು ಸಂಸ್ಕೃತ ವಿಶ್ವವಿದ್ಯಾನಿಲಯ. ಈ ಮೂರು ವಿಶ್ವವಿದ್ಯಾನಿಲಯಗಳೂ ಕೂಡ ಕರ್ನಾಟಕದಲ್ಲಿ ಆದಷ್ಟು ಶೀಘ್ರವಾಗಿ ಆಗುವುದಕ್ಕೆ ನಮ್ಮ ಸರ್ಕಾರ ಸತತವಾದ ಪ್ರಯತ್ನ ನಡೆಸಬೇಕು ಎಂದು ಮನವಿಮಾಡಿಕೊಳ್ಳುತ್ತಾ ಇದ್ದೇನೆ. ಬಹುಶಃ ಮೆಡಿಕಲ್ ಮತ್ತು ಸಂಸ್ಕೃತ ವಿಶ್ವವಿದ್ಯಾನಿಲಯಗಳ ಬಗ್ಗೆ ಹೇಳುವುದಾದರೆ ಕೇಂದ್ರ ಸರ್ಕಾರ ಈ ಎರಡು ವಿಶ್ವವಿದ್ಯಾನಿಲಯಗಳನ್ನು ದಕ್ಷಿಣ ಭಾರತಕ್ಕೆ ಕೊಡತಕ್ಕಂಥ ಮನೋಭಾವವನ್ನು ತಾಳಿದ್ದಾರೆ. ಸಂಸ್ಕೃತ ವಿಶ್ವವಿದ್ಯಾನಿಲಯವನ್ನು ತಮಿಳುನಾಡು ಅಪೇಕ್ಷೆ ಮಾಡುವುದಿಲ್ಲ, ಆದರೆ ಕೇರಳ ಬಹಳಮಟ್ಟಿಗೆ ಒತ್ತಡ ತಂದು ತನ್ನ ರಾಜ್ಯಕ್ಕೆ ತಂದುಕೊಳ್ಳತಕ್ಕಂಥ ಪ್ರಯತ್ನ ನಡೆಸುತ್ತಾ ಇರುವಾಗ ಕರ್ನಾಟಕ ಕಣ್ಣು ಮುಚ್ಚಿ ಕುಳಿತುಕೊಂಡು ಕೇಂದ್ರದಿಂದ ಬರತಕ್ಕಂಥ ಅಧಿಕಾರ, ಐಶ್ವರ್ಯವನ್ನು ಕೈಬಿಡತಕ್ಕಂಥದ್ದು ಕರ್ನಾಟಕಕ್ಕೆ ಮಾಡತಕ್ಕಂಥ ಸೇವೆ ಆಗುವುದಿಲ್ಲ, ಅದು ಅನ್ಯಾಯ ಮಾಡಿದಂತಾಗುತ್ತದೆ. ಆ ದೃಷ್ಟಿಯಿಂದ ಮೆಡಿಕಲ್ ಯೂನಿವರ್ಸಿಟಿ, ಮತ್ತು ಸಂಸ್ಕೃತ ಯೂನಿವರ್ಸಿಟಿಗಾಗಿ ಕರ್ನಾಟಕ ಸರ್ಕಾರ ಸತತ ಪ್ರಯತ್ನವನ್ನು ಶ್ರದ್ಧೆಯಿಂದಮಾಡಿ ಈ ಮೂರು ವಿಶ್ವವಿದ್ಯಾನಿಲಯಗಳು ಆದಷ್ಟು ತೀವ್ರವಾಗಿ ಬರುವುದಕ್ಕೆ ಪ್ರಯತ್ನ ಮಾಡಬೇಕು ಎಂದು ಈ ಸಂದರ್ಭದಲ್ಲಿ ಸರ್ಕಾರಕ್ಕೆ ಮನವಿಮಾಡಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಪಿ. ರಾಮದೇವ್.—ಕಾಸ್ಮೆಟಿಕ್ ಯೂನಿವರ್ಸಿಟಿ ಮಾಡುವುದು ಒಳ್ಳೆಯದು.

ಶ್ರೀ ಎಚ್. ಗಂಗಾಧರನ್.—ಕಾಸ್ಮೆಟಿಕ್ ಯೂನಿವರ್ಸಿಟಿ ಬೇಕಾಗಿಲ್ಲ ಮಾನ್ಯ ಅಧ್ಯಕ್ಷಿಣಿಯವರೇ, ಇದಕ್ಕೆ ನಾನು ತಿದ್ದುಪಡಿಯನ್ನು ತಂದಿದ್ದೇನೆ. ಅನಿವಾರ್ಯವಾಗಿ ಈ ಸಂದರ್ಭದಲ್ಲಿ ಹೇಳುತ್ತಾ ಇದ್ದೇನೆ. ಏನೆಂದರೆ ಎರಡು ಹೊಸ ವಿಶ್ವವಿದ್ಯಾನಿಲಯಗಳನ್ನು ಸಂಸ್ಥಾಪನೆ ಮಾಡತಕ್ಕ ಸಂದರ್ಭದಲ್ಲಿ ಇಂದು

ಮುಖ್ಯವಾಗಿ ಗಮನಿಸಬೇಕಾದಂಥ ಎರಡು ಅಂಶಗಳಿವೆ. ಯಾವ ಕ್ಷೇತ್ರ ಯಾವ ತತ್ವಕ್ಕೆ, ಯಾವ ಸಿದ್ಧಾಂತಕ್ಕೆ, ನೆಲೆಗಟ್ಟಾಗಿದೆಯೋ, ಯಾವ ತತ್ವದ ಆಧಾರದ ಮೇಲೆ ಈ ನಾಡಿನ ಗೌರವ ಪ್ರತಿಷ್ಠೆಗಳನ್ನು ಕಾಪಾಡಿಕೊಂಡು ಬಂದಿದೆಯೋ ಅಂಥಾ ಮಹಾ ವ್ಯಕ್ತಿಗಳ ಹೆಸರಿನ ಈ ವಿಶ್ವವಿದ್ಯಾನಿಲಯಗಳನ್ನು ಸ್ಥಾಪನೆ ಮಾಡುವುದು ಅಗತ್ಯ. ಗುಲ್ಬರ್ಗ ವಿಶ್ವವಿದ್ಯಾನಿಲಯಕ್ಕೆ ಬಸವೇಶ್ವರ ವಿಶ್ವವಿದ್ಯಾನಿಲಯ ಎಂದು ಹೆಸರಿಡಬೇಕು ಎಂಬ ತಿದ್ದುಪಡಿಯನ್ನು ನಾನು ತಂದಿದ್ದೇನೆ. ಮಂಗಳೂರಿನ ವಿಶ್ವವಿದ್ಯಾನಿಲಯಕ್ಕೆ ಜಯಪ್ರಕಾಶ ನಾರಾಯಣ್‌ರವರ ಹೆಸರನ್ನು ಇಡಬೇಕು ಎಂಬ ತಿದ್ದುಪಡಿಯನ್ನು ತಂದಿದ್ದೇನೆ. ಈ ತಿದ್ದುಪಡಿಗಳನ್ನು ತರುವುದಕ್ಕೆ ಮೂಲಭೂತವಾದಂಥ ಕಾರಣಗಳಿವೆ. ಭಾರತದಲ್ಲಿ ಅತ್ಯಂತ ಪ್ರಸಿದ್ಧವಾದಂಥ ವಿಶ್ವವಿದ್ಯಾನಿಲಯ ಸ್ಥಾಪನೆಯಾದದ್ದು ಬೌದ್ಧ ಯುಗದಲ್ಲಿ. ಅದು ತಕ್ಷಶಿಲಾ ವಿಶ್ವವಿದ್ಯಾನಿಲಯ. ಈ ತಕ್ಷಶಿಲಾ ವಿಶ್ವವಿದ್ಯಾನಿಲಯದ ನಂತರ ಅದೇ ಒಂದು ಮಟ್ಟದ ಪ್ರತಿಷ್ಠೆಯನ್ನು ಹೊಂದಿದ ವಿಶ್ವವಿದ್ಯಾನಿಲಯ ೧೨ನೇ ಶತಮಾನದಲ್ಲಿ ಸ್ಥಾಪನೆಯಾದುದು ಕರ್ನಾಟಕದಲ್ಲಿ; ಇಡೀ ಭಾರತದಲ್ಲಿ ಬೌದ್ಧ ಯುಗದ ನಂತರ ವಿಶ್ವವಿದ್ಯಾನಿಲಯ ಸ್ಥಾಪನೆಯಾದಂಥಾದ್ದು ಬಸವಣ್ಣನವರ ಒಂದು ನೇತೃತ್ವದಲ್ಲಿ. ಅದಕ್ಕೆ ಅನುಭವ ಮಂಟಪ ಎಂದು ಕರೆದಿದ್ದಾರೆ. ಇಂತಹ ವಿಶ್ವವಿದ್ಯಾನಿಲಯಗಳು ಇಂದಿನವರೆಗೆ ಜಗತ್ತಿನಲ್ಲೆಲ್ಲೂ ಪ್ರಾರಂಭವಾಗಿಲ್ಲ ಎನ್ನುವುದನ್ನು ನಾವು ಗಮನಿಸಬೇಕು. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ನಾಣ್ನುಡಿಯಾದ ಕನ್ನಡ ಭಾಷೆಯಲ್ಲಿ ವಿಶ್ವವಿದ್ಯಾನಿಲಯ ಪ್ರಾರಂಭವಾದಾಗ, ಅನ್ಯ ಭಾಷೆಯ ಪರಿಚಯವಿಲ್ಲದೆ ಇರತಕ್ಕ ಆ ಒಂದು ಬಸವಣ್ಣನವರು ಕಟ್ಟಿದಂಥ ಕಲ್ಯಾಣದ ವಿಶ್ವವಿದ್ಯಾನಿಲಯದಲ್ಲಿದ್ದಂಥ ಅಧ್ಯಾಪಕರುಗಳು, ಪ್ರಾಧ್ಯಾಪಕರುಗಳು ಯಾರು ಇದ್ದರು, ಅಲ್ಲಿ ಜಾತಿಮತ ಭೇದವನ್ನು ಅಳಿಸಿ ವಿಶ್ವವಿದ್ಯಾನಿಲಯ ಸ್ಥಾಪನೆಯಾಗಿತ್ತು. ಅದಕ್ಕೆ ಕೆಲವು ನಿದರ್ಶನಗಳನ್ನು ಕೊಡುವುದಾದರೆ, ಅಲ್ಲಿ ಒಬ್ಬ ಮಹಾಪ್ರಧಾನಿಯಾಗಿರತಕ್ಕವರು, ವಿದ್ವಾಂಸರಾಗಿರತಕ್ಕವರು ಕನ್ನಡ ಭಾಷೆಯನ್ನು ಗೊತ್ತಿಲ್ಲದೆ ಇರತಕ್ಕವರು ಇದ್ದರು. ಸಿಂಧು ಭಾಷೆಯನ್ನು ಬಲ್ಲಂಥ ಸಿಂಧು ದೇಶದಿಂದ ಬಂದಂಥ ಸಿಂಧು ಮರಾಳ ಎಂಬುವರು ದೊಡ್ಡ ವಿದ್ವಾಂಸರು. ಆಂಧ್ರಪ್ರದೇಶದ ನೆಲ್ಲೂರಿನ ತಂಗಟೂರು ಮಾರಯ್ಯ, ಕೇರಳದ ಚರಮಯ್ಯ, ಕಾಶ್ಮೀರದಿಂದ ಬಂದಿರತಕ್ಕ ಮಾರಯ್ಯ, ಪ್ರಸಿದ್ಧ ವಿದ್ವಾಂಸರು, ಮಾದರ ಚನ್ನಯ್ಯ, ಡೋಹಾರ ಕಕ್ಕಯ್ಯ, ಮಡಿವಾಳ ಮಾಚಯ್ಯ, ಕಿನ್ನರಿ ಬೊಮ್ಮಯ್ಯ ಮುಂತಾದವರು ಜಾತಿ ಮತ ಭೇದವಿಲ್ಲದೆ ನಾನಾ ಕ್ಷೇತ್ರಗಳಲ್ಲಿ ಕೆಲಸ ಮಾಡತಕ್ಕ ವ್ಯಕ್ತಿಗಳು ಅಧ್ಯಾಪಕ ವೃತ್ತಿಯನ್ನು ಅನುಭವಿಸಿ, ಒಂದು ಲಕ್ಷದ ೯೬ ಸಹಸ್ರ ಜನಕ್ಕೆ ಜ್ಞಾನವನ್ನು ನೀಡಿರತಕ್ಕದ್ದು ಬಸವಣ್ಣನವರು ಕಟ್ಟಿದಂಥ ಅನುಭವ ಮಂಟಪದಿಂದ. ಗುಲ್ಬರ್ಗ, ಬಿಜಾಪುರ, ಬೀದರ್ ಮುಂತಾದ ಕ್ಷೇತ್ರಗಳಲ್ಲಿ ಬಸವಣ್ಣನವರ ಪಾದಧೂಳಿನಿಂದ ಪವಿತ್ರವಾದ ಪುಣ್ಯ ಭೂಮಿಯಲ್ಲಿ ತಾವು ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡುತ್ತಾ ಇದ್ದೀರಿ. ಜಾತಿ ಮತಗಳನ್ನು ಭೇಧಗಳನ್ನು ತೊಡೆದು ಸರ್ವ ಜನಾಂಗವನ್ನು ಒಂದುಗೂಡಿಸತಕ್ಕಂಥ ಪ್ರಯತ್ನದಲ್ಲಿ, ಭಾರತದಲ್ಲಿ ಆ ಕಾಲದಲ್ಲಿ ಕ್ರಾಂತಿಯನ್ನು ನಡೆಸಿದಂಥ ಮಹಾನುಭಾವ ಬಸವಣ್ಣನವರಿಗೆ ಕನ್ನಡನಾಡಿನ ಯತ್ಕಿಂಚಿತ್ ಗೌರವ ಸಲ್ಲಿಸತಕ್ಕಂಥ ಅವಕಾಶ ಕಲ್ಪನೆ ಮಾಡಿದರೆ, ಆ ವಿಶ್ವವಿದ್ಯಾನಿಲಯಕ್ಕೆ ಬಸವೇಶ್ವರ ವಿಶ್ವವಿದ್ಯಾನಿಲಯ ಎಂದು ಹೆಸರನ್ನು ಇಡುವುದಕ್ಕಿಂತ ಬೇರೆ ಮಾರ್ಗವಿಲ್ಲವೆಂದು ನಿವೇದಿಸಿಕೊಳ್ಳುವುದಕ್ಕೆ ಇಚ್ಛೆಪಡುತ್ತಾ ಇದ್ದೇನೆ. ಬಸವಣ್ಣನವರು ಸ್ಥಾಪನೆಮಾಡಿದ ವಿಶ್ವವಿದ್ಯಾನಿಲಯದಲ್ಲಿದ್ದ ಅಧ್ಯಾಪಕರು ಯಾವುದೇ ಪ್ರಾಥಮಿಕ ಶಾಲೆಯಲ್ಲಿ ಬೋಧನೆ ಪಡೆಯದೇ ಇದ್ದರೂ ಪ್ರಸಿದ್ಧ ವ್ಯಕ್ತಿಗಳಾಗಿದ್ದಾರೆ ಗೋವಲ ರಾಮಣ್ಣ ದನ ಕಾಯುವವನು, ಅಲ್ಲಿ ಜ್ಞಾನವನ್ನು ಪಡೆದು ವಚನಗಳನ್ನು ರಚನೆಮಾಡಿರತಕ್ಕದ್ದು ಇತಿಹಾಸದಲ್ಲಿ ಸಿಕ್ಕುವುದಿಲ್ಲ; ತರಕಾರಿ ಮಾರುವ ಮಾರಪ್ಪ ಮಹಾ ವಿದ್ವಾಂಸನಾಗಿ ವಚನಗಳನ್ನು ರಚನೆ ಮಾಡಿರತಕ್ಕುದ್ದು ಜಗತ್ತಿನ ಯಾವ ಇತಿಹಾಸದಲ್ಲೂ ಕಾಣುವುದಿಲ್ಲ. ಅಂತಹ ಮಹಾ ವ್ಯಕ್ತಿಗಳು ಸೃಷ್ಟಿಮಾಡಿದ, ಸ್ಥಾಪನೆ ಮಾಡಿದ ವಿಶ್ವವಿದ್ಯಾನಿಲಯ ೧೨ ಶತಮಾನದಲ್ಲಿ. ಆ ದೃಷ್ಟಿಯಿಂದ ಈ ವಿಶ್ವವಿದ್ಯಾನಿಲಯಕ್ಕೆ 'ಬಸವೇಶ್ವರ ವಿಶ್ವವಿದ್ಯಾನಿಲಯ'' ಎಂದು ಹೆಸರನ್ನಿಡಬೇಕು ಎಂದು ಸರ್ಕಾರವನ್ನು ನಾನು ಅತ್ಯಂತ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತಾ ಇದ್ದೇನೆ. ಅದೇ ರೀತಿ ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಶ್ರೀ ಜಯಪ್ರಕಾಶ್ ನಾರಾಯಣ್‌ರವರ ಹೆಸರನ್ನಿಡಬೇಕು ಎಂದು ಹೇಳಿದ್ದೇನೆ. ಶ್ರೀಮಾನ್ ಜಯಪ್ರಕಾಶ್ ನಾರಾಯಣ್‌ರವರು ಲೋಕನಾಯಕರಾಗಿದ್ದರು, ಅವರ ಒಂದು ಮಾರ್ಗದರ್ಶನವಿರಬೇಕು. ಅವರು ಭಾರತದ ಸ್ವಾತಂತ್ರ್ಯಕ್ಕೆ ಹೋರಾಟಮಾಡಿ, ತಮ್ಮ ತನುಮನಧನಗಳನ್ನು ಅರ್ಪಿಸಿದಂಥ ಮಹಾನುಭಾವರು.

ಶ್ರೀ ಪಿ. ರಾಮದೇವ್.—ಮಂಜೇಶ್ವರ ಗೋವಿಂದಪೈ ಅವರು ಅಲ್ಲೇ ಹುಟ್ಟಿದ್ದು ಅವರ ಹೆಸರನ್ನಿಡಬಹುದಲ್ಲ. ಇಂಥಾ ರಾಷ್ಟ್ರಮಟ್ಟದ ವ್ಯಕ್ತಿಯನ್ನು ನಾವು ಇಂದು ಕಳೆದು ಕೊಂಡಿದ್ದೇವೆ. ಕವಿಗಳ ಹೆಸರು ಬಂದಾಗ, ಅವರವರ ಸೇವೆಯನ್ನು ಗುರುತಿಸಿ, ಕನ್ನಡ ಡಿಪಾರ್ಟ್‌ಮೆಂಟಿಗೆ, ಹಿಸ್ಟರಿ ಡಿಪಾರ್ಟ್‌ಮೆಂಟ್‌ಗಳಿಗೆ ಅವರವರ ಹೆಸರುಗಳನ್ನು ಇಟ್ಟುಕೊಳ್ಳಬಹುದು. ಆದರೆ ಇವತ್ತು ಎರಡು ವಿಶ್ವವಿದ್ಯಾನಿಲಯಗಳಲ್ಲಿ ಒಂದಕ್ಕೆ ಲೋಕ ನಾಯಕರಾಗಿರತಕ್ಕ ಜಯಪ್ರಕಾಶ್ ನಾರಾಯಣ್‌ರವರ ಹೆಸರನ್ನಿಡಬೇಕೆನ್ನುವ ಮನೋಭಾವನೆಯಿಂದ ಈ ಒಂದು ತಿದ್ದುಪಡಿಯನ್ನು ತಂದಿದ್ದೇನೆ. ಇದಕ್ಕೆ ಮೂಲ ಕಾರಣವೇನೆಂದರೆ, ಈ ಹೊತ್ತು ಜಯಪ್ರಕಾಶ್ ನಾರಾಯಣ್‌ರವರಂಥ ಮಹಾನ್ ವ್ಯಕ್ತಿಗಳ ಆದರ್ಶ ಭಾರತಕ್ಕೆ ಬೇಕಾಗಿದೆ. ಯಾವ ಮಹಾನ್ ವ್ಯಕ್ತಿ ತನ್ನ ಕಾಲ ಬಳಿಯಲ್ಲಿ ಅಧಿಕಾರ ಕೊಳೆಯುತ್ತಿದ್ದರೂ ಅದನ್ನು ತುಚ್ಛವಾಗಿ ಕಂಡರು; ಆದರೆ ಇವತ್ತು ರಾಜ್ಯಗಳಲ್ಲಿ ಅಧಿಕಾರಕ್ಕಾಗಿ ಹಾಗೂ ಅಜ್ಞಾನದಿಂದ ಅನಾಹುತಗಳನ್ನು ಮಾಡತಕ್ಕ ಒಂದು ಪರಿಸ್ಥಿತಿಯ ಮನೋಭಾವನೆ ಬೆಳೆಯುತ್ತಿರುವುದನ್ನು ಕಾಣುತ್ತಿದ್ದೇವೆ. ಅಧಿಕಾರದ ಲಾಲಸೆಗಾಗಿ ತತ್ವ ನೀತಿಗಳನ್ನೆಲ್ಲಾ ಬದಿಗೊತ್ತಿ ವ್ಯಕ್ತಿತ್ವವನ್ನು ಕಳೆದುಕೊಂಡಿರತಕ್ಕದ್ದನ್ನು ನಾವು ನೋಡಿದ್ದೇವೆ. ಆ ದೃಷ್ಟಿಯಿಂದ ನಿರ್ದಿಷ್ಟವಾಗಿ ವ್ಯಕ್ತಿತ್ವ ನಿರ್ಮಾಣ ಮಾಡತಕ್ಕ ಚೈತನ್ಯ ಮೂಡಿಸುವ ಸಲುವಾಗಿ ಅವರ ಸಾಮಸ್ಮರಣೆಯಿಂದಲೇ ಮನೋಭೂಮಿಕೆಯನ್ನು ಬದಲಾವಣೆ ಮಾಡಬಹುದು ಎನ್ನತಕ್ಕ ಕಾರಣದಿಂದ ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ದಿ : ಜಯಪ್ರಕಾಶ್ ನಾರಾಯಣ್‌ರವರ ಹೆಸರನ್ನಿಡಬೇಕೆಂದು ತಿದ್ದುಪಡಿಯನ್ನು ತಂದಿದ್ದೇನೆ. ನಮ್ಮಲ್ಲಿ ಒಂದೇ ರೀತಿಯಾದ ವಿಶ್ವವಿದ್ಯಾನಿಲಯಗಳು ಸಾಕಷ್ಟು ಇದೆ. We have enough universites and educational institutions to destroy the intellectual mind of the people. ಮನುಷ್ಯನನ್ನು ಅಧೋಗತಿಗೆ ಇಳಿಸತಕ್ಕ ವಿದ್ಯಾಭ್ಯಾಸವನ್ನು ಕಲಿಸುತ್ತಿದ್ದೇವೆ. ಮನುಷ್ಯನು ನೀತಿ ನಿಷ್ಟನಿಲ್ಲದ ಭ್ರಷ್ಟನಾಗತಕ್ಕ ವಿದ್ಯೆಯನ್ನು ನಾವು ಈ ವಿದ್ಯಾ ಸಂಸ್ಥೆಗಳಿಂದ ಕಲಿಸುತ್ತಿದ್ದೇವೆ. ಮನುಷ್ಯನನ್ನು ತತ್ವರಹಿತನನ್ನಾಗಿ ಮಾಡುವಂಥಾ ವಿದ್ಯಾಭ್ಯಾಸವನ್ನು ಸ್ಥಾಪನೆ ಮಾಡಿದ್ದೇವೆ ಮತ್ತು ಉದ್ಯೋಗಹೀನನ್ನಾಗಿ ಮಾಡತಕ್ಕ ವಿದ್ಯಾಭ್ಯಾಸವನ್ನು ನಾವು ಸ್ಥಾಪನೆ ಮಾಡಿದ್ದೇವೆ. ಆ ದೃಷ್ಟಿಯಿಂದ ಈಗ ನಾವು ಏನು ಸ್ಥಾಪನೆ ಮಾಡತಕ್ಕ ವಿಶ್ವವಿದ್ಯಾನಿಲಯವಿದೆ, ಅದು ಕೇವಲ ಹಿಂದಿನಿಂದ ಏನು ಭೋದನೆ ಮಾಡುತ್ತಿದೆ ಅನುಚೂನವಾಗಿ ನಡೆದುಕೊಂಡು ಬಂದಿರತಕ್ಕ ಪದ್ಧತಿ ಏನು ಇದೆ. ಆ ರೀತಿಯಾಗದೇ, ನಮ್ಮ ರಾಷ್ಟ್ರದ, ಜಗತ್ತಿನ ಅವಶ್ಯಕತೆಗಳಿಗೆ ಅವಕಾಶ ನೀಡಬಲ್ಲ ಪ್ರತಿಭಾವಂತರನ್ನು ನಿರ್ಮಾಣ ಮಾಡತಕ್ಕ ವಿದ್ಯಾಸಂಸ್ಥೆಗಳನ್ನಾಗಿ ಮಾಡಬೇಕೆನ್ನುವ ದೃಷ್ಟಿಯಿಂದ ಈ ಮಾತನ್ನು ಹೇಳುತ್ತಿದ್ದೇನೆ. ಇವತ್ತು ನಾವು ಮಾನವರಾಗಿ ಬದುಕಬೇಕಾಗಿದ್ದರೆ ಜಗತ್ತಿನಲ್ಲಿ ಶಾಂತಿ, ಶಿಸ್ತು, ಶಕ್ತಿಯನ್ನು ಪಡೆದುಕೊಳ್ಳಬೇಕಾಗಿದ್ದರೆ, ಇದು ಬಹಳ ಪ್ರಾಮುಖ್ಯವಾದ ಅಂಶವಾಗಿದೆ. ಇವತ್ತು ಮನುಷ್ಯನಲ್ಲಿ ಮಾನವೀಯತೆಯ ಶಕ್ತಿಯನ್ನು ಬೆಳೆಸಿಕೊಳ್ಳಬೇಕಾಗಿದ್ದರೆ ಅಧ್ಯಾತ್ಮಿಕ ಶಕ್ತಿಯನ್ನು ಬೆಳೆಸಿಕೊಳ್ಳಬೇಕಾಗಿದೆ ಆದುದರಿಂದ ಇವತ್ತು ನಾವು ಅಧ್ಯಾತ್ಮಿಕವಾಗಿ ಮತ್ತು ವೈಜ್ಞಾನಿಕವಾಗಿ ಈ ಎರಡು ಶಾಖೆಯಲ್ಲಿ ಪ್ರಗತಿಯನ್ನು ಸಾಧಿಸಬೇಕಾಗಿದೆ. ಆದುದರಿಂದ It must be made as a spiritual imparting University. ಇವು ಅಧ್ಯಾತ್ಮಿಕ ಶಕ್ತಿಯ ಕೇಂದ್ರವಾಗಬೇಕಾಗಿದೆ. ಇವತ್ತು ಹಿಮಾಚಲ ಪ್ರದೇಶದಲ್ಲಿ ಒಂದು ಹೊಸ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡತಕ್ಕ ಒಂದು ಯೋಜನೆಯನ್ನು ಅಲ್ಲಿಯ ಸರ್ಕಾರ ಹಾಕಿಕೊಂಡಿದೆ. ನಮ್ಮಲ್ಲಿಯೂ ಅಂಥಾ ಅವಕಾಶ ಸಿಕ್ಕಿರುವುದರಿಂದ ಅದರಲ್ಲಿಯೂ ಗುಲ್ಬರ್ಗದಲ್ಲಿ ಒಂದು ಯೂನಿವರ್ಸಿಟಿ ಯಾಗುತ್ತಿರುವುದರಿಂದ ಅದಕ್ಕೆ ಬಸವೇಶ್ವರ ಯೂನಿವರ್ಸಿಟಿ ಎಂದು ಹೆಸರು ಇಟ್ಟು ಅಧ್ಯಾತ್ಮಿಕ ವಿಶ್ವವಿದ್ಯಾನಿಲಯವನ್ನಾಗಿ ಮಾಡಬೇಕಾಗಿದೆಂದು ಸೂಚಿಸಬಯಸುತ್ತೇನೆ. ಮತ್ತೆ ಇದರಲ್ಲಿ ಭೋದನೆ ಮಾಡತಕ್ಕ ಪಠ್ಯ ಕ್ರಮಗಳನ್ನೂ ಬದಲಾವಣೆಯಾಗಬೇಕಾಗಿದೆಂದು ಹೇಳುತ್ತೇನೆ. ಸರ್ಕಾರ ಇದರ ಕಡೆಗೆ ಹೆಚ್ಚಿನ ಗಮನ ಕೊಡಬೇಕಾಗಿದೆ. ಪ್ಯಾರಾ ಸೈಕಾಲಜಿ, ಮನುಷ್ಯನ ಭವಿಷ್ಯವನ್ನು ಮತ್ತು ಹಿಂದಿನ ಜನ್ಮದ ವಿಷಯವನ್ನು ಸಂಶೋಧನೆ ಮಾಡಿ ಅದನ್ನು ಜಗತ್ತಿಗೇ ಕೊಡಬಲ್ಲ ಪ್ರಯೋಗಗಳನ್ನು ಜಗತ್ತಿನ ಎಲ್ಲಾ ರಾಷ್ಟ್ರಗಳಲ್ಲಿಯೂ ನಡೆಯುತ್ತಿದೆ. ಅಮೇರಿಕಾ, ರಷ್ಯಾ ದೇಶಗಳಲ್ಲಿ ಈ ಪ್ಯಾರಾ ಸೈಕಲಾಜಿಗೋಸ್ಕರವಾಗಿ ಅಲ್ಲಿ ನಡೆಯುತ್ತಿರುವ ಸಂಶೋಧನೆಗಾಗಿ ಕೋಟ್ಯಾಂತರ ರೂಪಾಯಿಗಳ ಹಣವನ್ನು ವೆಚ್ಚ ಮಾಡುತ್ತಿದ್ದಾರೆ. ಅಲ್ಲಿ ಅದ್ವಿತೀಯ ಮತ್ತು ಅದ್ಭುತವಾದ ಕೆಲಸಗಳು ನಡೆಯುತ್ತಿದೆ. ಇದು ಮಾನ್ಯ ಸಚಿವರಿಗೆ ಗೊತ್ತಿಲ್ಲದೇ ಇರಬಹುದು.

ಶ್ರೀ ಜಿ. ಬಿ. ಶಂಕರ್ ರಾವ್.—ನಾನು ಯು.ಎಸ್.ಎಸ್.ಆರ್.ಗೆ ಹೋಗಿದ್ದೆ, ಗೊತ್ತಿದೆ ಬಿಡಿ.

ಶ್ರೀ ಜಿ. ಎಚ್. ಗಂಗಾಧರನ್.—ನೋಡಿದರೆ ಗೊತ್ತಾಗುವುದಿಲ್ಲ, ಅದರ ಬಗ್ಗೆ ಸ್ಟಡಿ ಮಾಡಿ, ಓದಿ ತಿಳಿದುಕೊಳ್ಳಬೇಕು. ನಿಮಗೆ ಗೊತ್ತಿಲ್ಲದೇ ಇದ್ದರೆ ಹೇಳುತ್ತೇನೆ ಕೇಳಿ. ನಿಮ್ಮನ್ನು ಯಾರೋ ಕರೆದುಕೊಂಡು ಹೋಗಿದ್ದರು, ಈ ಕುದುರೆಗಳ ಕಣ್ಣಿಗೆ ಕಟ್ಟುತ್ತಾರಲ್ಲ ಹಾಗೆ ನಿಮ್ಮನ್ನು ಎಲ್ಲೋ ಕರೆದು ಕೊಂಡು ಹೋಗಿ ಬಂದಿದ್ದಾರೆ ಅಷ್ಟೇ.

ಶ್ರೀ ಜಿ. ಬಿ. ಶಂಕರ್ ರಾವ್.—ಇಲ್ಲ ಓದಿದ್ದೇನೆ, ಗೊತ್ತಿದೆ ಹೇಳಿ.

ಶ್ರೀ ಜಿ. ಎಚ್. ಗಂಗಾಧರನ್.—ಗೊತ್ತಿದ್ದರೆ ಸಂತೋಷ. ವಾಯ್ಸ್ ಟು ರಶಿಯನ್, ನೆದರ್‌ಲ್ಯಾಂಡ್ ನೈಬರರ್ಸ್ ಇಂಥಾ ಸಂಶೋಧನೆಗಳನ್ನೆಲ್ಲಾ ರಷ್ಯಾ ಸರ್ಕಾರದವರ ವತಿಯಿಂದ ಮಾಡಿದ್ದಾರೆ. ಅಲ್ಲಿ ಅದ್ವಿತೀಯ ಮತ್ತು ಅದ್ಭುತವಾದ ಕೆಲಸಗಳನ್ನು ಈ ಪ್ಯಾರಾ ಸೈಕಲಾಜಿ ಬಗ್ಗೆ ನಡೆದಿದೆ. ಸ್ಪೇಸ್ ರಿಸರ್ಚ್ ಬಗ್ಗೆ ತುಂಬಾ ಸಂಶೋಧನೆ ನಡೆಸಿದ್ದಾರೆ. Yoga technology, Mysticism, medicals musicology......

ಶ್ರೀ ಜಿ ಬಿ, ಶಂಕರ್‌ರಾವ್.—ಇದೇನು ತಾವು ಮಿಸ್ಟಿಜಂ, ಯೋಗ ಬಗ್ಗೆ ಎಲ್ಲಾ ಹೇಳುವುದಕ್ಕೆ ಹೊರಟಿದ್ದೀರಲ್ಲಾ ?

ಶ್ರೀ ಹೆಚ್. ಗಂಗಾಧರನ್.—ಇವತ್ತು ನಮ್ಮ ರಾಷ್ಟ್ರದೊಳಗೆ ಒಂದು ಲಕ್ಷ ಕೋಟಿ ರೂಪಾಯಿಗಳನ್ನು ೫ ಪಂಚವಾರ್ಷಿಕ ಯೋಜನೆಗಳಲ್ಲಿ ಖರ್ಚು ಮಾಡಿದರೂ ಸಹ ಜನಜೀವನದ ಒಂದು ಅಭ್ಯುದಯ ಸಾಧನೆ ಆಗಿಲ್ಲ, ಇವತ್ತು ನಮ್ಮ ಮನುಷ್ಯನ ಮಾನವೀಯತೆಯ ಮನೋಧರ್ಮ ಬದಲಾವಣೆಯಾಗುತ್ತಿಲ್ಲ. ಇದು ಬದಲಾವಣೆಯಾಗದ ಹೊರತು ನಾವು ಇನ್ನು ಎಷ್ಟೇ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೆ ಅದನ್ನು ಬದಲಾವಣೆ ಮಾಡುವುದಕ್ಕೆ ಸಾಧ್ಯವಿಲ್ಲವೆಂದು ವಿನೋಬಭಾವೆ ಅವರು ಹೇಳಿದ್ದಾರೆ, ಇವತ್ತು ಮನುಷ್ಯ ಆದವನು ಆಧ್ಯಾತ್ಮಿಕ ಶಕ್ತಿಯನ್ನು ಬೆಳೆಸಿಕೊಂಡು ಇಡೀ ಜಗತ್ತಿನ ಮಾನವ ಜನಾಂಗಕ್ಕೇ ಅನುಕೂಲವಾಗುವಂಥಾ ಒಂದು ವ್ಯಕ್ತಿತ್ವವನ್ನು ಬೆಳೆಸಿಕೊಳ್ಳುವಂತಹ ಈ ಕೆಲಸ ವಿಶ್ವವಿದ್ಯಾನಿಲಯಗಳಿಂದ ಆಗಬೇಕಾಗಿದೆ. ಅಂಥಾ ಒಂದು ವಿದ್ಯೆಯನ್ನು ನಾವು ಇಲ್ಲಿಯವರೆಗೆ ಒದಗಿಸುವುದಕ್ಕೆ ಆಗಿಲ್ಲ. ಆದುದರಿಂದ ಇವತ್ತು ವಿದ್ಯಾ ಸಂಸ್ಥೆಗಳು ಆಧ್ಯಾತ್ಮಿಕ ವಿಕಾಸಕ್ಕೆ ಹೆಚ್ಚಿನ ಮಹತ್ವವನ್ನು ಕೊಡಬೇಕಾಗಿದೆ. ಇದರ ಬಗ್ಗೆ ತಾವು ಹೆಚ್ಚಿನ ಪ್ರಾಶಸ್ತ್ಯ ಕೊಟ್ಟು ಮಾಡಬೇಕಾಗಿದೆ ಅದನ್ನು ಬಿಟ್ಟು ಬರೀ ಪೊಲಿಟಿಕಲ್ ಸೈನ್ಸ್, ಹಿಸ್ಟರಿ, ಕನ್ನಡ ಎಂ.ಎ. ಮಾಡಿ ನೌಕರಿ ಕೊಡುವುದಕ್ಕೆ ಸಾಧ್ಯವಿಲ್ಲದೆ ಅವರು ನಿರುದ್ಯೋಗಿಗಳನ್ನಾಗಿ ಕೂಡಿಸುವ ಹಾಗೆ ಮಾಡಬಾರದು ಇವತ್ತು ಮಂಗಳೂರಿನಲ್ಲಿ ಸ್ಥಾಪನೆ ಮಾಡತಕ್ಕ ಜಯಪ್ರಕಾಶನಾರಾಯಣ್ ವಿಶ್ವವಿದ್ಯಾನಿಲಯದಲ್ಲಿ ನಾವು ಕಲಿಸಬೇಕಾದ ವಿಷಯಗಳ ಬಗ್ಗೆ ಬಹಳ ಕೂಲಂಕುಷವಾಗಿ ವಿಚಾರ ಮಾಡಬೇಕಾಗಿದೆ. ಇವತ್ತು ಸಮಾಜದಲ್ಲಿ ಕ್ರಾಂತಿಯ ಬಗ್ಗೆ ಪಾಠಪ್ರವಚನಗಳನ್ನು ಮಾಡುವ ಹಾಗಿದ್ದರೆ ಆ ಹೆಸರನು ಇಡಿರಿ, ಇಲ್ಲದಿದ್ದರೆ ಬರೀ ಕ್ಲರ್ಕ್‌ಗಳನ್ನು ತಯಾರುಮಾಡತಕ್ಕ ಯೂನಿವರ್ಸಿಟಿಯನ್ನಾಗಿ ಮಾಡುವುದಾದರೆ ಆ ಹೆಸರನ್ನು ಇಡಬೇಡಿ.

ಶ್ರೀ ಪಿ. ರಾಮದೇವ್.—ಆಗಲೇ ಯೂನಿವರ್ಸಿಟಿಗೆ ಹೆಸರನ್ನೇ ಇಟ್ಟು ಬಿಟ್ಟರಲ್ಲಾ.

ಶ್ರೀ ಹೆಚ್. ಗಂಗಾಧರನ್.—ಆದುದರಿಂದ ಸಂಪೂರ್ಣವಾಗಿ ಕ್ರಾಂತಿ ಆಗ ಬೇಕಾಗಿದ್ದರೆ ನಾನು ಆಗಲೇ ಹೇಳಿದ ಹಾಗೆ ಒಂದು ವೈಜ್ಞಾನಿಕ ಪ್ರಗತಿಗೆ ಮತ್ತು ಒಂದು ಆಧ್ಯಾತ್ಮಿಕ ಪ್ರಗತಿಗೋಸ್ಕರವಾಗಿ ಮಾಡಿ ನಮ್ಮಲ್ಲಿ ಇನ್ನು ಯೋಗಾ ಟೆಕ್ನಾಲಜಿ ಬಂದಿಲ್ಲ.

SRI G. B. SHANKARA RAO —They are the subjects to be introduced and they do not pertain to the subject which is before us now. You can take them later on.

SRI P. RAMDEV.—He is trying to educate the Minister for Education.

ಶ್ರೀ ಹೆಚ್, ಗಂಗಾಧರನ್.—ಪ್ರಾರಂಭ ಮಾಡುವಾಗಲೇ ಒಂದು ಯೋಜನೆ ಹಾಕಿಕೊಳ್ಳಬೇಕಾಗುತ್ತದೆ. ಮಾಮೂಲು ಕ್ಲರ್ಕ್ ಆಗತಕ್ಕಂಥ ಪದ್ಧತಿಯನ್ನು ತಪ್ಪಿಸಿ, ರಷ್ಯಾದಲ್ಲಿ ಮೆಟಲರ್ಜಿಗೋಸ್ಕರವಾಗಿ ಅವರು ಏನು ಮಾಡುತ್ತಿದ್ದಾರೆ ಎಂದರೆ ಅದಕ್ಕೆ ಹೆಚ್ಚಿನ ಪ್ರಾಶಸ್ತ್ಯ ಕೊಟ್ಟು ಎಲೆ

ಮೊಂಟರಿ ಹಂತದಿಂದಲೇ ಅವರು ಪ್ರಾರಂಭ ಮಾಡುತ್ತಾರೆ. ಇದರಿಂದಾಗಿ ಅವರು ಇಷ್ಟು ಸಂಶೋಧನೆ ಮಾಡುವುದಕ್ಕೆ ಸಾಧ್ಯವಾಗಿದೆ.

ಶ್ರೀ ಬಿ. ವಿ. ಕಕ್ಕಿಲಾಯ.—ಸ್ವಾಮಿ, ಈ ಮಸೂದೆಯ ಉದ್ದೇಶವೇನೆಂದರೆ, ನಾನು ತಿಳಿದಹಾಗೆ ಈಗಾಗಲೇ ತಡವಾಗಿದೆ ಅದಕೋಸ್ಕರವಾಗಿ ಹೆಚ್ಚು ಶೀಘ್ರವಾಗಿ ಈ ಎರಡು ಯೂನಿವರ್ಸಿಟಿಗಳ ಸ್ಥಾಪನೆ ಆಗಬೇಕು ಎನ್ನುವುದೇ ಮುಖ್ಯ ಕಾರಣವಾಗಿದೆ ಆದುದರಿಂದ ಮಾನ್ಯ ಸಚಿವರು ಈ ತಿದ್ದುಪಡಿ ತಂದಿದ್ದಾರೆ. ಮಂಗಳೂರು ಯೂನಿವರ್ಸಿಟಿಯವರು ಒಂದು ಕಮಿಷನ್ ನೇಮಕ ಮಾಡಿದ್ದಾರೆ. ಅದರಲ್ಲಿ ನಾನು ಕೂಡ ಒಬ್ಬ ಸದಸ್ಯನಾಗಿದ್ದೇನೆ. ಈಗ ಮಾನ್ಯ ಸದಸ್ಯರು ಹೇಳಿದ್ದನ್ನೆಲ್ಲಾ ಕೇಳಿದೆ ಅವರು ಹೇಳಿದ ಕೆಲವು ಅಲ್ಲಿ ಇದೆ, ಕೆಲವು ಮಾತ್ರ ಇಲ್ಲ. ಅದನ್ನು ಬೋಧನೆ ಮಾಡಬೇಕೆಂದರೆ ಮುಂದೆ ಪ್ರಾರಂಭ ಮಾಡಬಹುದು. ಅದಕ್ಕಾಗಿ ಸಮಗ್ರ ಎಜುಕೇಷನ್ ಬಿಲ್ ತರುತ್ತೇವೆಂದು ಈಗಾಗಲೇ ಮಾನ್ಯ ಸಚಿವರು ಹೇಳುತ್ತಿದ್ದಾರೆ. ಆ ಸಂದರ್ಭದಲ್ಲಿ ಈ ಸಲಹೆಗಳನ್ನೆಲ್ಲಾ ಮಾನ್ಯ ಸದಸ್ಯರು ಕೊಡಬಹುದು. ಆಗ ಅದರಿಂದ ಉಪಯೋಗವಾಗಬಹುದು. ಈಗ ಈ ಎರಡು ಯೂನಿವರ್ಸಿಟಿಗಳನ್ನು ಶೀಘ್ರವಾಗಿ ಸ್ಥಾಪನೆ ಮಾಡುವುದಕ್ಕೆ ಸಂಬಂಧಪಟ್ಟಂತೆ ಈ ತಿದ್ದುಪಡಿಯನ್ನು ತಂದಿದ್ದಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ಆದುದರಿಂದ ಈಗ ಇದನ್ನೆಲ್ಲಾ ಇಲ್ಲಿ ಹೇಳುವುದು ಅಷ್ಟು ಸೂಕ್ತವಾಗಿ ಕಾಣುವುದಿಲ್ಲವೆಂದು ನನ್ನ ಭಾವನೆ.

೧೧-೩೦ ಎ. ಎಂ.

ಶ್ರೀ ಹೆಚ್. ಗಂಗಾಧರನ್.—ನಾನೇನು ಹೊಸದಾಗಿ ಏನನ್ನೂ ಹೇಳಲಿಲ್ಲ. ಆದುದರಿಂದ ತಾವು ಏಕೆ ಗಾಬರಿಗೊಳ್ಳುತ್ತೀರಿ ? ಶೀಘ್ರವಾಗಿ ಮನೆ ಕಟ್ಟಬೇಕೆಂದು ಕಟ್ಟುತ್ತೇವೆ. ಆದರೂ ಕೂಡ ಮೊದಲೇ ಅಡಿಗೆ ಮನೆ ಎಲ್ಲಿರಬೇಕು, ಬಚ್ಚಲು ಮನೆ ಎಲ್ಲಿರಬೇಕು, ತಳಪಾಯ ಹೇಗಿರಬೇಕು, ಮೇಲೆ ಹೇಗಿರಬೇಕು ಎಂಬುದನ್ನೆಲ್ಲ ನಿಯುಕ್ತ ಮಾಡಬೇಕೇ ವಿನಹ ಮನೆ ಕಟ್ಟಿದ ಮೇಲೆ ಮಾಡುವುದಕ್ಕಾಗುವುದಿಲ್ಲ ಅದ್ದರಿಂದ. ಹಳೇ ಪದ್ಧತಿಯನ್ನೇ ಅನುಸರಿಸುವಂತಹ ವಿಶ್ವವಿದ್ಯಾನಿಲಯಗಳ ನಿರ್ಮಾಣದ ಅಗತ್ಯ ನಮಗೆ ಇಲ್ಲ. ಅದಕ್ಕೆ ನಾನು ಮೊದಲೇ ಹೇಳಿದೆ. "We have enough Universities to destroy the manpower or mankind".

SRI G. B. SHANKARA RAO.—The remarks made by the hon. member are not pertaining to the amendment. We are going to bring comprehensive amendment Bill to the exising Act. The remarks made by the hon. member are not called for at this stage.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ವಿದ್ಯಾ ಮಂತ್ರಿಗಳು ಬಹಳ ಚೆನ್ನಾಗಿ ವ್ಯಾಖ್ಯಾನ ಮಾಡುತ್ತಿದ್ದಾರೆ, ಮಾಡಲಿ ಅದಕ್ಕೆ ನಮ್ಮದೇನು ಅಭ್ಯಂತರವಿಲ್ಲ. ಆದರೆ ಅವರು ಹೇಳಿದ್ದು ನಮಗೆ ತಿಳಿಯಬೇಕಲ್ಲ, ಆಂಗ್ಲ ಭಾಷೆಯಲ್ಲಿ ಅವರು ಮಾತನಾಡಿದರೆ ನಮಗೆ ಖಂಡಿತ ತಿಳಿದುಕೊಳ್ಳುವುದಕ್ಕಾಗುವುದಿಲ್ಲವಾದ ಕಾರಣ ದಯವಿಟ್ಟು ನಮಗೆ ತಿಳಿಯುವಂತೆ ಕನ್ನಡ ಭಾಷೆಯಲ್ಲಿ ಹೇಳಬೇಕೆಂದು ಅವರಲ್ಲಿ ವಿನಂತಿ.

ಶ್ರೀ ಹೆಚ್. ಗಂಗಾಧರನ್,—ಆಧುನಿಕ ಶಿಕ್ಷಣದಲ್ಲಿ ವಿದ್ಯಾರ್ಥಿಗಳಿಗೆ ಏನು ದೊರೆಯಬೇಕೆಂಬುದರ ಬಗ್ಗೆ ನಾನು ಕೆಲವು ಅಂಶಗಳನ್ನು ಹೇಳುತ್ತಿದ್ದೆ. ನನ್ನ ಮೂಲ ಉದ್ದೇಶವಾದರೂ ಇಷ್ಟೆ, ನಿಜವಾಗಿ ವಿಜ್ಞಾನದ ಪ್ರಗತಿಗೆ ಸಾಧನೆಯಾಗತಕ್ಕ ವಿಷಯಗಳನ್ನು ಹೊಸದಾಗಿ ಸ್ಥಾಪಿಸತಕ್ಕ ವಿಶ್ವವಿದ್ಯಾನಿಲಯಗಳಲ್ಲಿ ಇದರ ಹಳೇ ಭೌತಶಾಸ್ತ್ರ, ರಾಸಾಯನ ಶಾಸ್ತ್ರ. ಹಳೇ ಪ್ರಯೋಗಶಾಲೆ, ಹಳೇ ಪುಸ್ತಕಗಳನ್ನೇ ಮುಂದುವರಿಸಿಕೊಂಡು ಹೋದರೆ ಏನೂ ಪ್ರಯೋಜನವಾಗುವುದಿಲ್ಲ. ವಿಶ್ವವಿದ್ಯಾನಿಲಯಗಳ ಸ್ಥಾಪನೆಗೆ ೧೩೦ ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಿ ಮತ್ತೆ ನಿರುದ್ಯೋಗಿಗಳ ತಂಡವನ್ನು ನಿರ್ಮಾಣ ಮಾಡುವ ಸ್ಥಿತಿಗೆ ಅವು ಬರಬಾರದೆಂಬ ಉದ್ದೇಶದಿಂದ ನಾನು ಈ ಮಾತನ್ನು ಹೇಳುತ್ತಿದ್ದೇನೆ. ಇದನ್ನು ಮಾನ್ಯ ವಿದ್ಯಾಖಾತೆಯ ಮಂತ್ರಿಗಳು ತೀವ್ರವಾಗಿ ಗಮನಿಸಬೇಕಾಗಿದೆ. ತಾವು ಏನು ಆರ್ಡಿನೆನ್ಸ್ ಮುಖಾಂತರ ಇದನ್ನು ತಂದಿದ್ದೀರಿ, ಅದನ್ನು ಈಗ ನಾವು ರೀಪ್ಲೇಸ್ ಮಾಡುತ್ತಿದ್ದೇವೆ. ಯಾವ ಉದ್ದೇಶಕ್ಕೋಸ್ಕರ ಮಾಡುತ್ತಿದ್ದೇವೆಂದರೆ, ಆಡಳಿತವನ್ನು ನಡೆಸುವುದಕ್ಕೆ ನಾವು ಅಸಮರ್ಥರು ಎಂದು ಮಾಡುತ್ತಿಲ್ಲ, ಸಮರ್ಥರಾಗಿಯೇ ಮಾಡುತ್ತಿದ್ದೇವೆ. ನನ್ನ ಮಿತ್ರರೊಬ್ಬರು ಆಗಲೇ ಹೇಳಿದ ಹಾಗೆ ವಿಶ್ವವಿದ್ಯಾನಿಲಯಗಳು

ನಡೆಸತಕ್ಕ ಕಾಲೇಜುಗಳನ್ನು ತಾವು ತೆಗೆದುಕೊಳ್ಳತಕ್ಕ ಪ್ರಯೋಗವನ್ನೇನು ಮಾಡಿದ್ದೀರಿ ಅದನ್ನು ರದ್ದು ಮಾಡಬೇಕೆಂದು ಹೇಳುತ್ತೇನೆ. ಖಂಡಿತಾ ಇದರಲ್ಲಿ ಯಾರದ್ದೋ ಒಂದು ಪಿತೂರಿ ಇದೆ ಎಂದು ಕಾಣುತ್ತದೆ. Probably, it must be the intention of the bureaucrats. ನಮ್ಮ ಸರ್ಕಾರದ ನೀತಿಯ ಧೋರಣೆಯ ಆಧಾರದ ಮೇಲೆ ಇದು ಇಲ್ಲ. ಒಂದೊಂದು ವಿಶ್ವವಿದ್ಯಾನಿಲಯಕ್ಕೂ ಒಂದೆರಡು ಕಾಲೇಜುಗಳನ್ನು ಕೊಡಬೇಕೆಂದು ನಿಶ್ಚಯ ಮಾಡಿ ತಜ್ಞರ ಅಭಿಪ್ರಾಯ ಪಡೆದು ಆ ಒಂದು ಆಧಾರದ ಮೇಲೆ ಕೊಟ್ಟಿದ್ದನ್ನು ಪುನಃ ವಾಪಸ್ಸು ಕಿತ್ತುಕೊಳ್ಳತಕ್ಕ ಪ್ರಯತ್ನವನ್ನು ದಯವಿಟ್ಟು ಬಿಡಬೇಕು. ಒಂದು ವೇಳೆ ಒಂದು ವಿಶ್ವವಿದ್ಯಾನಿಲಯ ಎರಡು ಸಣ್ಣ ಕಾಲೇಜುಗಳನ್ನು ನಡೆಸುವುದಕ್ಕೆ ಆಗಲಿಲ್ಲವೆಂದರೆ ಅದು ವಿಶ್ವವಿದ್ಯಾನಿಲಯವೇ ಆಗುವುದಿಲ್ಲ. ಹಾಗಾದರೆ, ವಿಶ್ವವಿದ್ಯಾನಿಲಯವಾದರೂ ಹೇಗೆ ನಡೆಯಬಲ್ಲದು ?

ಶ್ರೀ ಜಿ. ಬಿ. ಶಂಕರರಾವ್.— ಅದು ತೆಗೆದುಕೊಳ್ಳುವ ಪ್ರಸಂಗ ಬಂದರೆ ಈ ವಿಧಾನವನ್ನು ಅನುಸರಿಸುವ ಅವಶ್ಯಕತೆ ಇದೆ. ಆದರೆ ನಾವು ತೆಗೆದುಕೊಂಡಿಲ್ಲ.

ಶ್ರೀ ಹೆಚ್. ಗಂಗಾಧರನ್.— ಯಾವುದಕ್ಕೂ ಅನುಭವ ಇರಬೇಕು, ಇಲ್ಲವಾದರೆ ಮುಂದಿನ ಯೋಚನೆ ಇರಬೇಕು. Either you must have the future thinking or you must have the past experience We do not find anything here. ಮುಂದೆ ಅನುಭವಕ್ಕೆ ಬರುತ್ತದೆಂದು ಯಾವ ಆಧಾರದ ಮೇಲೆ ಹೇಳಿದ್ದೀರಿ. ಈಗ ಏನು ಅನುಭವವಾಗಿದೆ ಎಂದು ಹೇಳುತ್ತಿದ್ದೀರಿ. There is no experience to take them. There is no future thinking to take them. ಯಾವುದೂ ಇಲ್ಲದೇ ಇದ್ದಾಗ ಸುಲಲಿತವಾಗಿ, ಯಶಸ್ವಿಯಾಗಿ ಆ ವಿಶ್ವವಿದ್ಯಾನಿಲಯಗಳು ತನ್ನ ಅಧಿಕಾರ ವ್ಯಾಪ್ತಿಯಲ್ಲಿ ಸರಿಯಾಗಿ ನಡೆಸಿಕೊಂಡು ಬಂದಿರುವಾಗ ಅವನ್ನು ತೆಗೆದುಕೊಳ್ಳುವ ಅವಶ್ಯಕತೆಯಾದರೂ ಏನು ಇದೆ ? ಆದುದರಿಂದ ಈ ಕಾನೂನನ್ನು ಅಳವಡಿಸಿಕೊಳ್ಳುವ ಅವಶ್ಯಕತೆ ಏನು ಇದೆ ಎಂದು ಕೇಳುತ್ತೇನೆ ? ಈ ಬಗ್ಗೆ ಬೇಕಾದರೆ ಸಮಯ ಬಂದಾಗ ತಿದ್ದುಪಡಿ ತರಬಹುದಾಗಿತ್ತು. This is a hanging sward. ಮುಂದೆ ಅನಾಹುತ ಏನಾಗುತ್ತದೆಂಬುದನ್ನು ಯೋಚಿಸಬೇಕು. ಕರ್ನಾಟಕ ಏಕೀಕರಣವಾದ ಮೇಲೆ ಹೈದರಾಬಾದಿನಿಂದ ಬಂದಿರತಕ್ಕ ಪ್ರಾಥಮಿಕ ಮತ್ತು ಕಾಲೇಜು ಶಿಕ್ಷಕರ ಸೇವಾ ವಿಚಾರಗಳು ಇನ್ನೂ ತೀರ್ಮಾನವಾಗಿಲ್ಲ : ಸೀನಿಯಾರಿಟಿ ಗೊಂದಲ ಇದೆ. ಇದೆಲ್ಲ ಇರುವಾಗ ಸರ್ಕಾರೀ ಕಾಲೇಜಿನಲ್ಲಿ ಆಡಳಿತ ನಡೆಸತಕ್ಕ ನೌಕರರಿಗೆ ಮತ್ತು ಅಧ್ಯಾಪಕರಿಗೆ ಹಾಗೂ ವಿಶ್ವವಿದ್ಯಾನಿಲಯದಲ್ಲಿ ಬರತಕ್ಕ ನೌಕರರಿಗೆ ಮತ್ತು ಅಧ್ಯಾಪಕರಿಗೆ ಸೇವೆಯಲ್ಲಿ ವ್ಯತ್ಯಾಸ ಇರುವುದರಿಂದ ದಯಮಾಡಿ ಈ ತಿದ್ದುಪಡಿಯನ್ನು ಕೈಬಿಡಬೇಕೆಂದು ಹೇಳುತ್ತೇನೆ. ಒಟ್ಟಿನಲ್ಲಿ, ತಾವು ತಂದಿರತಕ್ಕ ತಿದ್ದುಪಡಿಯಲ್ಲಿ ಆ ಸೆಕ್ಷನನ್ನು ಕೈ ಬಿಟ್ಟು ಈ ವಿಶ್ವವಿದ್ಯಾನಿಲಯಗಳು ಯಶಸ್ವಿಯಾಗುವುದಕ್ಕೆ ನೆರವಾಗಬೇಕೆಂದು ಹೇಳುತ್ತಾ, ಈ ಮಸೂದೆಯನ್ನು ಸ್ವಾಗತಿಸಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಡಿ. ಟಿ. ರಾಮು (ಚನ್ನಪಟ್ಟಣ) — ಸನ್ಮಾನ್ಯ ಉಪ ಸಭಾಧ್ಯಕ್ಷಿಣಿಯವರೆ, ಈ ದಿನ ಮಾನ್ಯ ವಿದ್ಯಾ ಸಚಿವರು ಈ ಒಂದು ವಿಶ್ವವಿದ್ಯಾನಿಲಯಗಳ ತಿದ್ದುಪಡಿ ಮಸೂದೆಯನ್ನು ಏನು ತಂದಿದ್ದಾರೆ, ಇದನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ಕಾರಣವಾದರೂ ಇಷ್ಟೆ; ಈ ರಾಜ್ಯದಲ್ಲಿ ೩ ವಿಶ್ವವಿದ್ಯಾನಿಲಗಳು ಇದ್ದವು ಅವು ಯಾವುವೆಂದರೆ, ಮೈಸೂರು ವಿಶ್ವವಿದ್ಯಾನಿಲಯ, ಬೆಂಗಳೂರು ವಿಶ್ವವಿದ್ಯಾನಿಲಯ ಮತ್ತು ಕರ್ನಾಟಕ ವಿಶ್ವವಿದ್ಯಾನಿಲಯ. ಈ ವಿಶ್ವವಿದ್ಯಾನಿಲಯಗಳ ಗುಣಮಟ್ಟ ಜಾಸ್ತಿಯಾಗಬೇಕು, ಇಲ್ಲಿ ತಯಾರಾಗತಕ್ಕ ಪದವೀಧರರು ರಾಷ್ಟ್ರದ ಎಲ್ಲ ವಿಶ್ವವಿದ್ಯಾನಿಲಯಗಳ ಪದವೀಧರರಿಗಿಂತಲೂ ಹೆಚ್ಚಿನ ಮಟ್ಟದವರಾಗಬೇಕೆಂಬ ದೃಷ್ಟಿಯಿಂದ ಮತ್ತು ಆಡಳಿತದ ದೃಷ್ಟಿಯಿಂದಲೂ ಸಹ ೩ ವಿಶ್ವವಿದ್ಯಾನಿಲಯಗಳ ಬದಲಾಗಿ ೫ ವಿಶ್ವವಿದ್ಯಾನಿಲಗಳನ್ನು ಸ್ಥಾಪನೆ ಮಾಡಬೇಕು (ಒಂದನ್ನು ಗುಲ್ಬರ್ಗದಲ್ಲೂ ಮತ್ತೊಂದನ್ನು ಮಂಗಳೂರಿನಲ್ಲಿ) ಎಂದು ಮತ್ತೆ ೨ ವಿಶ್ವವಿದ್ಯಾನಿಲಯಗಳನ್ನು ಸ್ಥಾಪಿಸುವುದಕ್ಕೆ ಹೊರಟಿದ್ದು ಸ್ವಾಗತಾರ್ಹವಾದ ವಿಷಯ. ಈ ಒಂದು ಸನ್ನಿವೇಶದಲ್ಲಿ ಸಮಗ್ರ ಮಸೂದೆಯನ್ನು ತರುವ ಸಲುವಾಗಿ ಕೆಲವು ತಿದ್ದುಪಡಿಗಳನ್ನು ತಂದಿರುವುದು ನಿಜಕ್ಕೂ ಒಳ್ಳೆಯದು. ವಿಶ್ವವಿದ್ಯಾನಿಲಯಗಳೆಂದರೆ, ಅವು ಯಾವಾಗಲೂ ರಾಜಕೀಯ ಪ್ರಭಾವದಿಂದ ದೂರ ಇರಬೇಕು. ಅದರಲ್ಲಿ ಸರ್ಕಾರದ ಹಸ್ತಕ್ಷೇಪ ಇರಬಾರದು. ಅದರಲ್ಲಿ ಯಾವುದೇ ಪಟ್ಟಭದ್ರ ಹಿತಾಶಕ್ತಿ

ಗಳ ಕೈವಾಡ ಇರಬಾರದೆಂಬ ಉದ್ದೇಶದಿಂದ ವಿಶ್ವವಿದ್ಯಾನಿಲಯಗಳಿಗೆ ಕಾಲೇಜು ಮಟ್ಟವನ್ನು ಅಂದರೆ ಅಂಡರ್ ಗ್ರಾಜುಯೇಟ್ ಕೋರ್ಸ್ ಎಂದು ಏನು ಇರುತ್ತದೆ ಅದಕ್ಕಿಂತ ಹೆಚ್ಚಿನ ಮಟ್ಟದ ವಿದ್ಯಾಭ್ಯಾಸವನ್ನು ಕೊಡುವ ಕೆಲಸವನ್ನು ಅವರಿಗೆ ವಹಿಸಲಾಗಿದೆ. ಆ ಒಂದು ದಿಕ್ಕಿನಲ್ಲಿ ವಿಶ್ವವಿದ್ಯಾನಿಲಯಗಳು ಬಹಳಷ್ಟು ಒಳ್ಳೆಯ ಕೆಲಸವನ್ನು ಮಾಡುತ್ತಿವೆ ಎಂದು ನನ್ನ ಭಾವನೆ. ಈ ಮಸೂದೆಯ ೬ನೇ ವಿಧಿಯಲ್ಲಿರುವ ೧೯ನೇ ಸೆಕ್ಷನ್ ಬಹಳ ಸೂಕ್ತವಾಗಿದೆ. ಅದೇ ರೀತಿ ೧೨ನೇ ವಿಧಿಯಲ್ಲಿರುವ ೪೯ನೇ ಸೆಕ್ಷನ್ ಕೂಡ ಚನ್ನಾಗಿದೆ. ನಮ್ಮ ಕರ್ನಾಟಕ ರಾಜ್ಯದವರೇ ಇರುವಾಗ ಠಿನೆಯವರನ್ನು ಏತಕ್ಕೆ ತರಬೇಕೆಂಬ ವಾದವನ್ನು ಮಾನ್ಯ ಮಿತ್ರರಾದ ಹಾರನಹಳ್ಳಿ ರಾಮಸ್ವಾಮಿಯವರು ಇಟ್ಟಿದ್ದರು. ಈಗ ಪ್ರತಿಭೆಗೆ ರಾಜ್ಯ ಮಟ್ಟದ ಚೌಕಟ್ಟನ್ನು ಕೊಡದೆ ರಾಷ್ಟ್ರ ಮಟ್ಟದ ಚೌಕಟ್ಟನ್ನು ಕೊಡಬೇಕು. ಆ ಕಾರಣದಿಂದ ಈ ಒಂದು ತಿದ್ದುಪಡಿಯನ್ನು ತಂದಿರುವುದು ಸ್ವಾಗತಾರ್ಹವಾಗಿದೆ. ಇನ್ನು ೧೪ನೇ ವಿಧಿಯ ಸೆಕ್ಷನ್ ೬೮ರಲ್ಲಿ ಏನು ಹೇಳುತ್ತಾರೆಂದರೆ,

> "The Government may, at any time and after consulting the Syndicate, by order, transfer any University College excluding post-graduate courses and teachers and other employees connected theirwith to the Government and from the date of such transfer, the said college shall be a Government College." ಎಂದು ;

ಅಂದರೆ ವಿಶ್ವವಿದ್ಯಾನಿಲಯದಲ್ಲಿರತಕ್ಕ ಕೆಲವು ಕಾಲೇಜುಗಳನ್ನು ಸರ್ಕಾರ ವಹಿಸಿಕೊಳ್ಳುವುದಕ್ಕೆ ಒಂದು ಅವಕಾಶ ಮಾಡಿಕೊಡಲಾಗಿದೆ.

ಯಾವಾಗಲೂ ವಿಶ್ವವಿದ್ಯಾನಿಲಯಗಳ ವ್ಯಾಪ್ತಿಯಲ್ಲಿ ಕೆಲವು ಕಾಲೇಜುಗಳನ್ನು ಇಡುವುದು ಒಳ್ಳೆಯದು ಉದಾಹರಣೆಗೆ ಹೇಳುವುದಾದರೆ ಬೆಂಗಳೂರು ವಿಶ್ವವಿದ್ಯಾನಿಲಯಕ್ಕೆ ಸೆಂಟ್ರಲ್ ಕಾಲೇಜನ್ನೂ, ಮೈಸೂರು ವಿಶ್ವವಿದ್ಯಾನಿಲಯಕ್ಕೆ ಮಹಾರಾಜಾ ಕಾಲೇಜು ಮತ್ತು ಯುವರಾಜಾ ಕಾಲೇಜನ್ನೂ ನ್ಯೂಕ್ಲಿಯಸ್ಸಾಗಿಟ್ಟುಕೊಂಡು ಸ್ಥಾಪನೆ ಮಾಡಿದ್ದಾರೆ. ಬೇರೆ ಕೆಲವು ಕಾಲೇಜುಗಳನ್ನು ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಸರ್ಕಾರ ಡೈರೆಕ್ಟರೇಟನ್ನು ಮಾಡಿಕೊಂಡು ಏನು ನಡೆಸುತ್ತಿದೆ, ಅಲ್ಲಿ ಪಠ್ಯದ ವಿಷಯಗಳನ್ನು ಅಳವಡಿಸಬೇಕಾದರೆ ಮೊದಲು ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಇರತಕ್ಕ ಕಾಲೇಜುಗಳಲ್ಲಿ ಪ್ರಾಯೋಗಿಕವಾಗಿ ನಡೆಸಿ ಅದು ಉತ್ತಮವಾದುದು ಎಂದು ಕಂಡು ಬಂದರೆ ಬೇರೆ ಕಾಲೇಜುಗಳಿಗೂ ಆ ಪಠ್ಯಕ್ರಮವನ್ನು ಹೊಂದಿಸತಕ್ಕದ್ದು ಸರ್ಕಾರದ ಮತ್ತು ವಿಶ್ವವಿದ್ಯಾನಿಲಯದ ಪದ್ಧತಿ ಆಗಬೇಕು. ಆ ದೃಷ್ಟಿಯಿಂದ ನಾನು ಮೊದಲು ಏನು ಹೇಳಿದೆ, ಆ ಎರಡು ಮೂರು ಕಾಲೇಜುಗಳು ಆ ವಿಶ್ವವಿದ್ಯಾನಿಲಯಕ್ಕೆ ಹೊಂದಿಕೊಂಡಿರುವಂತೆ ಮಾಡಬೇಕೆಂಬುದು ನನ್ನ ಉದ್ದೇಶ. ವಿಶ್ವವಿದ್ಯಾನಿಲಯ ತನ್ನ ದೌರ್ಬಲ್ಯವನ್ನು ತೋರಿಸಿ ತನಗೆ ಬೇಡ ಎಂದು ಹೇಳಿದಾಗ ಸರ್ಕಾರ ವಹಿಸಿಕೊಳ್ಳುವುದರಲ್ಲಿ ಅರ್ಥ ಉಂಟು. ಆದರೆ ಸರ್ಕಾರವೇ ವಿಶ್ವವಿದ್ಯಾನಿಲಯಗಳಲ್ಲಿರತಕ್ಕ ಕಾಲೇಜುಗಳನ್ನು ತೆಗೆದುಕೊಳ್ಳುವುದರಲ್ಲಿ ಯಾವ ಅರ್ಥವಿಲ್ಲ. ನೀವು ತಂದಿರತಕ್ಕ ಮಸೂದೆಯಲ್ಲಿ ನಾಳೆಯೇ ವಿಶ್ವವಿದ್ಯಾನಿಲಯದ ಕಾಲೇಜುಗಳನ್ನು ತೆಗೆದುಕೊಳ್ಳಬೇಕು ಎಂಬ ಉದ್ದೇಶವಿಲ್ಲ. ಆದರೆ ಮುಂದೆ ಬರತಕ್ಕ ಯಾರಾದರೂ ಸಚಿವರು ತಮ್ಮ ಪ್ರಭಾವ ಬೀರಬಹುದು ಅಥವಾ ಪಟ್ಟಭದ್ರಹಿತಾಸಕ್ತಿಗಳನ್ನು ಇಟ್ಟುಕೊಂಡು ಆ ಕಾಲೇಜನ್ನು ವರ್ಗಾಯಿಸಿ ಎಂದು ಕೇಳಬಹುದು ? ಆ ಕಾರಣದಿಂದ ನನಗಾದರೂ ಅನ್ನಿಸುತ್ತದೆ, ಏನೆಂದರೆ ೬೮ನೇ ಸೆಕ್ಷನ್‌ನ್ನು ಈ ಮಸೂದೆಯಿಂದ ತೆಗೆದುಹಾಕತಕ್ಕದ್ದು ಒಳ್ಳೆಯದೆಂದು. ಇಲ್ಲದಿದ್ದರೆ ಅಧ್ಯಾಪಕರ ಸೇವಾನಿಯಮಗಳಿಗೆ ವ್ಯತಿರಿಕ್ತವಾದ ಕೆಲಸ ನಡೆಯುವುದಕ್ಕೆ ಅವಕಾಶವಾಗುತ್ತದೆ. ಸೆಕ್ಷನ್ ೬೮ನ್ನು ತೆಗೆದು ಹಾಕದಿದ್ದರೆ ಕೆಲವು ವೇಳೆ ಶಿಷ್ಯರ ಕೈಕೆಳಗೆ ಗುರುಗಳು ಕೆಲಸ ಮಾಡಬೇಕಾದ ಸಂದರ್ಭ ಬರಬಹುದು. ಸೀನಿಯರ್‌ಗಳು ಜ್ಯೂನಿಯರ್‌ಗಳಾಗುವ ಸಂದರ್ಭ ಬರಬಹುದು, ಒಬ್ಬ ಬಿ.ಎ. ಮಾಡಿರುತ್ತಾನೆ. ಇನ್ನೊಬ್ಬ ಎಂ.ಎ. ಮಾಡಿರಬಹುದು. ಎಂ.ಎ. ಮಾಡಿರುವವನು ಗುಮಾಸ್ತನಾಗಿರಬಹುದು. ಆದರೆ ಬಿ.ಎ. ಮಾಡಿರುವವನು ಐ.ಎ.ಎಸ್. ಪಾಸ್ ಮಾಡಿಕೊಂಡು ಡೆಪ್ಯುಟಿ ಕಮಿಷನರ್ ಆಗಿ ಬರಬಹುದು. ಆಗ ಎಂ.ಎ. ಮಾಡಿರುವವನು ಅವನ ಕೈ ಕೆಳಗೆ ಕೆಲಸ ಮಾಡುವುದಿಲ್ಲವೇ ಎಂದು ಕೇಳಬಹುದು ? ಆದರೆ ಇಲ್ಲಿ ಆ ರೀತಿ ಆಗುವುದಿಲ್ಲ. ತಾವೇ ಪಾಠ

ಕಲಿಸಿದ ಶಿಷ್ಯನ ಕೈಕೆಳಗೆ ಕೆಲಸ ಮಾಡಬೇಕು ಎಂದರೆ ಒಂದು ರೀತಿಯ ಕಿರಿಕಿರಿಯಾಗುತ್ತದೆ. ಆ ಕಾರಣ ದಿಂದ ಸೆಕ್ಷನ್ ೭೮ನ್ನು ಕೈಬಿಡುವುದು ಒಳ್ಳೆಯದು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದರ ಜೊತೆಗೆ ಇನ್ನೂ ಕೆಲವು ಒಳ್ಳೆಯ ಸೆಕ್ಷನ್‌ಗಳನ್ನು ಇದರಲ್ಲಿ ಸೇರಿಸಿದ್ದೀರಿ. ಇದು ಸ್ವಾಗತಾರ್ಹವಾದುದು. ಇನ್ನೊಂದು ವಿಷಯ ಏನೆಂದರೆ, ವಿಶ್ವವಿದ್ಯಾನಿಲಯಗಳಿಗೆ ಉಪಕುಲಪತಿಗಳನ್ನು ನೇಮಿಸುವಾಗ ಶಿಕ್ಷಣ ಕ್ಷೇತ್ರದಲ್ಲಿ ಒಳ್ಳೆಯ ಸೇವೆ ಮಾಡಿರುವವರನ್ನು ನೇಮಿಸಬೇಕು. ವಿಶ್ವವಿದ್ಯಾನಿಲಯಗಳಲ್ಲಿ ಅನೇಕ ಜನ ಪ್ರತಿಭಾವಂತ ಪ್ರಾಧ್ಯಾಪಕರುಗಳಿದ್ದಾರೆ. ಅವರ ಸೇವೆ ವಿದ್ಯಾರ್ಹತೆ ಮತ್ತು ಹಿರಿತನವನ್ನು ಪರಿಗಣಿಸಿ ಉಪಕುಲಪತಿಗಳನ್ನಾಗಿ ನೇಮಿಸಬೇಕು. ಉದಾಹರಣೆಗೆ, ಗುಲ್ಬರ್ಗ ವಿಶ್ವವಿದ್ಯಾನಿಲಯದಲ್ಲಿ ಉಪಕುಲ ಪತಿಗಳನ್ನು ನೇಮಿಸಬೇಕಾದರೆ ಆ ಪ್ರದೇಶದಲ್ಲಿ ಇರತಕ್ಕ ಒಳ್ಳೆಯ ಪ್ರಾಧ್ಯಾಪಕರನ್ನು ನೇಮಿಸಬೇಕು. ಅದೇ ರೀತಿ ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಉಪಕುಲಪತಿಗಳನ್ನು ನೇಮಿಸುವಾಗ ಆ ಪ್ರದೇಶದಲ್ಲಿ ಉತ್ತಮ ಸೇವೆ ಸಲ್ಲಿಸಿರುವ ಹಿರಿಯ ಪ್ರಾಧ್ಯಾಪಕರನ್ನು ನೇಮಿಸಬೇಕೆಂದು ಮಾನ್ಯ ವಿದ್ಯಾಸಚಿವರನ್ನು ಪ್ರಾರ್ಥಿಸಿ ಈ ತಿದ್ದುಪಡಿ ಮಸೂದೆ ಏನಿದೆ ಇದು ಸ್ವಾಗತಾರ್ಹವಾದದು ಎಂದು ತಿಳಿಸಿ ೭೮ನೇ ಸೆಕ್ಷನ್‌ನ್ನು ಮಾತ್ರ ಸಂಪೂರ್ಣವಾಗಿ ಕೈಬಿಡಬೇಕೆಂದು ಕೇಳಿಕೊಳ್ಳುತ್ತೇನೆ. ನಮ್ಮ ರಾಜ್ಯದ ವಿಶ್ವವಿದ್ಯಾ ನಿಲಯಗಳು, ಸರಸ್ವತಿ ಮಂದಿರಗಳು, ಜ್ಞಾನಮಂದಿರಗಳಾಗಿ ಇಡೀ ರಾಷ್ಟ್ರದಲ್ಲೇ ಅತ್ಯಂತ ಪರಿಣಾಮ ಕಾರಿಯಾದ ರೀತಿಯಲ್ಲಿ ಕೆಲಸ ಮಾಡಲಿ ಎಂದು ಹಾರೈಸಿ ಇಷ್ಟು ಮಾತನಾಡಲು ಅವಕಾಶ ಕೊಟ್ಟಂಥ ಮಾನ್ಯ ಉಪಾಧ್ಯಕ್ಷಿಣಿಯವರಿಗೂ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

SRI QUAMARUL ISLAM (Gulbarga).— Madam Deputy Speaker, I welcome the Karnataka State Universities (Amendment) Bill, 1980 which seeks to establish two new Universities one at Gulbarga and another at Mangalore. I welcome this Bill because, Gulbarga, Raichur, Bidar and Bellary colleges were under the Karnataka University which has failed to control the number of colleges which were under its control and the strength of the students was more than 75,000, there was not proper supervision by the Karnataka University and the establishment of such a University was a necessity and the need of the hour for the Hyderabad Karnataka area. With the new University coming into being, we expect to have good standard of education and better exercise of control over these colleges. I would like to propose an amendment to this new University, because the name also would play an important role. There were people in India with their mysticism and spiritual teaching who have made a great name and have left great impressions in the minds of India. There was a great mystic in Gulbarga by name Khaja Bandenawaz-Shahini. He died at the age of 1·5 and he was the author of 105 books. The first Urdu prose book was written by Khaja Bande Nawaz and the language about 700 years back was Deccani language. Because of his books in Deccani language, that language was given the status of literary language. Now it has become a literary language. After independence Mahatma Gandhi gave us a theory of languages that Hindustani is the only language. The Hindustani language is the mixture of Persian, Urdu and Hindi. It may be written either in Devanagari script or in Persian. Mahatma Gandhi got inspiration from Khaja Bande Nawaz who died in the thirteenth century. Because of his writings, the Deccani language was given a status of the

